**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ. ಕಂಪ್ಲೆಂಟ್/ಉಪಲೋಕ್/ಬಿಜಿಎಂ/1029/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.

ದಿನಾಂಕ: 25.11.2020

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ**

**ವಿಷಯ:** ದಿ ಇಂಡಸ್ಟ್ರಿಯಲ್ ಬ್ಯಾಂಕ್ ಬೆಳಗಾವಿ ಇದರಲ್ಲಿ ನಕಲಿ ಬಂಗಾರದ ಆಭರಣಗಳನ್ನು ಅಡವಿಟ್ಟು ಅಂದಾಜು 4 ಕೋಟಿ ಹಣ ವಂಚಿಸಿದ್ದಾರೆ. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಕುರಿತು

*****

1. ಶ್ರೀ ಗಣಪತಿ ರಾಮಚಂದ್ರ ಉಪ್ಪಾರಿ, ಗಾಯಿತ್ರಿ ನಗರ, ಕಸಬಾ, 3ನೇ ಕ್ರಾಸ್, ಪಿ.ಬಿ.ರಸ್ತೆ, ಬೆಳಗಾವಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) (1) ಶ್ರೀ ಉಲ್ಲಾಸ್ ಸದಾಶಿವ ಹೊನ್ನಲ್, ವ್ಯವಸ್ಥಾಪಕರು, (2) ಶ್ರೀ ದಿಲಿಪ್ ತಿಲ್ಲಕೋನಿ, ವ್ಯವಸ್ಥಾಪಕರು, (3) ಶ್ರೀ ಉಮೇಶ್ ಬಂಡೇವಡ್ಕರ್, ಬಂಗಾರದ ವಾಲ್ಯುಯೇಟರ್ (4) ಶ್ರೀ ಸೋಮಪ್ಪ ನರಸಪ್ಪ ಹೊನ್ನಹಳ್ಳಿ, ಚೇರ್‌ಮೆನ್, 'ದಿ ಬೆಳಗಾಂ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಬ್ಯಾಂಕ್, ಎಸ್.ಪಿ.ಎಂ. ರಸ್ತೆ, ಶಹಾಪುರ, ಬೆಳಗಾವಿ (ಇನ್ನು ಮುಂದೆ '1 ರಿಂದ 4ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

2. (5) ಶ್ರೀ ಪಿ.ಎಲ್.ಬೆಳಗಾಲಿ, ಸಿಇಓ (6) ಶ್ರೀ ಅಶೋಕ್ ಬಿ. ಹುನಗುಂದ, ಕ್ಯಾಷಿಯರ್ (7) ಶ್ರೀ ಆನಂದ್ ಆರ್. ಬುಚಡಿ, ಕ್ಯಾಷಿಯರ್ (8) ಶ್ರೀ ಎಂ.ಸುಲ್ದಲ್, ಪಾಸಿಂಗ್ ಆಫೀಸರ್, ಉದಯಂ ವಿಭಾಗ, (9) ಶ್ರೀ ಬಸವರಾಜ ಜಿ. ಉಡ್ಕೇರಿ, ಕಿರಿಯ ಸಹಾಯಕರು, ಉದಯಂ ವಿಭಾಗ, (10) ಶ್ರೀ ಕೆ.ಸುರೇಂದ್ರ, ಕಿರಿಯ ಸಹಾಯಕರು, (11) ಶ್ರೀ ಆರ್.ವಿ. ಪಿಲ್ಲ, ಪಾಸಿಂಗ್ ಆಫೀಸರ್ (12) ಶ್ರೀ ಎನ್.ಜಿ.ಭೂತೇ, ಕ್ಯಾಷಿಯರ್ (13) ಶ್ರೀ ಎಂ.ವಿ.ಅಪ್ಪಗೋಲ, ಕಿರಿಯ ಸಹಾಯಕರು (14) ಶ್ರೀ ಕೆ.ಎಂ.ಬಡಗಾವಿ, ಸದಸ್ಯರು (15) ಶ್ರೀ ಐ.ಜಿ.ಕ್ಯಾಸತಿ, ಸದಸ್ಯರು

(16) ಶ್ರೀ ಯು.ಜಿ.ಬೋಮಾಲ, ಸದಸ್ಯರು (17) ಶ್ರೀ ಎಸ್.ವಿ.ದವಾಲಿ, ಸದಸ್ಯರು (18) ಶ್ರೀ ಎಸ್.ಎಂ.ದವಾಲಿ, ಸದಸ್ಯರು (19) ಶ್ರೀ ಸತ್ಪುತೇ, ಸದಸ್ಯರು (20) ಶ್ರೀ ಬಿ.ಎನ್.ಹತ್ವಕ್ಕಿ, ಸದಸ್ಯರು (21) ಶ್ರೀ ವಿ.ಆರ್.ಯಲಗೊಂಡ, ಸದಸ್ಯರು (22) ಶ್ರೀ ಯು.ಜಿ.ಸಂಕಪಾಲ, ಸದಸ್ಯರು (23) ಶ್ರೀ ಎಸ್.ಕೆ.ದೋತ್ರೆ ಸದಸ್ಯರು ಮತ್ತು, (24) ಶ್ರೀ ನಿರ್ಮಲಾ ಎಸ್. ಕಾಮಕರ್, ಸದಸ್ಯರು 'ದಿ ಬೆಳಗಾಂ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಬ್ಯಾಂಕ್, ಎಸ್.ಪಿ.ಎಂ. ರಸ್ತೆ, ಶಹಾಪುರ, ಬೆಳಗಾವಿ (ಇನ್ನು ಮುಂದೆ 'ಎದುರುದಾರರು 5 ರಿಂದ 24' ಎಂದು ಕರೆಯಲ್ಪಡುತ್ತಾರೆ) ರವರುಗಳನ್ನು ತನಿಖಾ ಅವಧಿಯಲ್ಲಿ 5 ರಿಂದ 24ನೇ ಎದುರುದಾರರನ್ನಾಗಿ ಸೇರಿಸಲಾಗಿದೆ.

3. ದೂರಿನ ಸಾರಾಂಶ:

ದಿ ಇಂಡಸ್ಟ್ರಿಯಲ್ ಬ್ಯಾಂಕ್ ಬೆಳಗಾವಿ ಇದರಲ್ಲಿ ನಕಲಿ ಬಂಗಾರದ ಆಭರಣಗಳನ್ನು ಅಡವಿಟ್ಟು ಅಂದಾಜು 4 ಕೋಟಿ ಹಣ ವಂಚಿಸಿದ್ದಾರೆ. ದಿ ಇಂಡಸ್ಟ್ರಿಯಲ್ ಕೋ ಆಪರೇಟಿವ್ ಬ್ಯಾಂಕ್ ನಿಯಮಿತ, ಬೆಳಗಾವಿ ತಾಲ್ಲೂಕು ಉದ್ಯಮ ಭಾಗ ಶಾಖೆಯಲ್ಲಿ ನಕಲಿ ಬಂಗಾರದ ಆಭರಣಗಳನ್ನು ಅಡವಿಟ್ಟು 265 ಬೋಗಸ್ ಖಾತೆಗಳ ಹೆಸರಿನಲ್ಲಿ ಹಾಗೂ ಅಂದಾಜು ನಾಲ್ಕು ಕೋಟಿ ಹಣವನ್ನು ವಂಚಿಸಿದ್ದಾರೆ. ಶಾಖೆಯ ಮ್ಯಾನೇಜರ್ ಬಂಗಾರ ವ್ಯಾಲ್ಯುಯೇಟರ್ ಚೇರಮೆನ್ ಹಾಗೂ 265 ರಿಂದ300 ಬ್ಯಾಂಕಿನ ಗೋಲ್ಡ್ ಲೋನ್ ಖಾತೆದಾರರು ಶಾಮೀಲು ಆಗಿರುತ್ತಾರೆ. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

4. ಸಹಕಾರ ಸಂಘಗಳ ನಿಬಂಧಕರ ಮಧ್ಯಂತರ ವರದಿ:

ಬ್ಯಾಂಕಿನ ಉಧ್ಯಮಭಾಗ ಶಾಖೆಯಲ್ಲಿ ಚಿನ್ನಾಭರಣಗಳ ಅಡವಿನ ಸಾಲಗಳಲ್ಲಿ ಅವ್ಯವಹಾರ ನಡೆದಿರುವುದಾಗಿ ಸ್ಥಳೀಯ ದಿನ ಪತ್ರಿಕೆಗಳಲ್ಲಿ ಪ್ರಕಟಗೊಂಡ ಹಿನ್ನಲೆಯಲ್ಲಿ ತಪ್ಪಿತಸ್ಥ ಸಿಬ್ಬಂದಿ ಮೇಲೆ ಸಿವಿಲ್, ಕ್ರಿಮಿನಲ್ ಹಾಗೂ ಶಿಸ್ತು ಕ್ರಮವನ್ನು ಜರುಗಿಸಲು ಸೂಚಿಸಲಾಗಿದೆ. 430 ಚಿನ್ನದ ಆಭರಣಗಳ ಅಡವಿನ ಸಾಲಗಳ ಪೈಕಿ 162 ಬಂಗಾರದ ಆಭರಣಗಳ ಪ್ಯಾಕೆಟು ಸರಿ ಇದ್ದು, ಉಳಿದ 268 ಬಂಗಾರದ ಆಭರಣಗಳ ಸಾಲದ ಮೊತ್ತ ರೂ.377.53 ಲಕ್ಷ ನಕಲಿ ಇರುವುದು ಕಂಡು ಬಂದ ಕಾರಣ ಉದ್ಯಮಭಾಗ ಆರಕ್ಷಕ ಠಾಣೆಯಲ್ಲಿ ಅಪರಾಧ ಸಂಖ್ಯೆ: 28/2015ನ್ನು ದಾಖಲಿಸಿರುತ್ತಾರೆ. ಬಂಗಾರದ

ಮೌಲ್ಯಮಾಪಕರ ಆಸ್ತಿಗೆ ದಿನಾಂಕ: 17/03/2015 ರಂದು ತೀರ್ಪು ಪೂರ್ವ ಜಪ್ತಿ ಆದೇಶ ಹೊರಡಿಸಿದೆ. ಆಡಳಿತ ಮಂಡಳಿಯು ಸಂಬಂಧಪಟ್ಟ ಸಿಬ್ಬಂದಿಗಳನ್ನು ಅಮಾನತ್ತುಗೊಳಿಸಿರುತ್ತದೆ ಹಾಗೂ ಅವರ ವಿರುದ್ಧ ಆಂತರಿಕೆ ವಿಚಾರಣೆಗೆ ಆದೇಶಿಸಿದೆ ಎಂದು ನಮೂದಿಸಿರುತ್ತಾರೆ. ಸಹಕಾರ ಸಂಘಗಳ ಕಾಯ್ದೆ 1959ರ ಕಲಂ64ರಡಿ ವಿಚಾರಣೆಗೆ ಆದೇಶವಾಗಿದ್ದು ವಿಚಾರಣೆ ನಡೆಸಿ ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾವಿ ಯವರು ವರದಿ ಮತ್ತು ದಾಖಲೆಗಳನ್ನು ಸಲ್ಲಿಸಿರುತ್ತಾರೆ.

5. ಸಹಕಾರ ಸಂಘಗಳ ಜಂಟಿ ನಿಬಂಧಕರ ವರದಿ:

ಉಧ್ಯಮ್‌ಬಾಗ್ ಶಾಖೆಯಲ್ಲಿ ಚಿನ್ನಾಭರಣದ ಮೇಲಿನ ಸಾಲಕ್ಕೆ ಸಂಬಂಧಿಸಿದ ಅವ್ಯವಹಾರಗಳ ಬಗ್ಗೆದಾಖಲೆಗಳನ್ನು ಪರಿಶೀಲಿಸಿ ವಿಚಾರಣಾ ಸಮಯದಲ್ಲಿ ಶಾಖೆಯ ಬಂಗಾರದ ಆಭರಣಗಳ ಪ್ಯಾಕೆಟ್‌ಗಳನ್ನು ಪರಿಶೀಲಿಸಿದಾಗ ಸಂಶಯಾತ್ಮಕವಾಗಿ ಕಂಡು ಬಂದ ಕಾರಣ, ಕಡೆಬಜಾರ್ ಶಾಖೆಯ ಬಂಗಾರದ ಮೌಲ್ಯಮಾಪಕರನ್ನು ಕರೆಸಿ ಬಂಗಾರದ ಪ್ಯಾಕೆಟ್‌ಗಳನ್ನು ಪರಿಶೀಲಿಸಲಾಗಿ ಅದು ನಕಲಿ ಬಂಗಾರದ ಆಭರಣಗಳೆಂದು ಸಂಶಯ ವ್ಯಕ್ತಪಡಿಸಿರುತ್ತಾರೆ. ನಂತರ ಶಾಖಾ ವ್ಯವಸ್ಥಾಪಕರು ಶಾಖೆಯ ಮೌಲ್ಯಮಾಪಕರು ಹಾಗೂ ಶಾಖಾ ಸಿಬ್ಬಂದಿಗಳ ಸಮ್ಮುಖದಲ್ಲಿ 430 ಚಿನ್ನಾಭರಣ ಸಾಲದ ಖಾತೆಗೆ ಸಂಬಂಧಿಸಿದ ಚಿನ್ನಾಭರಣಗಳ ನೈಜತೆಯನ್ನು ಪರೀಕ್ಷಿಸಲಾಗಿದ್ದು, 430 ಖಾತೆಗಳಲ್ಲಿ 162 ಖಾತೆಗಳ ಚಿನ್ನಾಭರಣಗಳು ಅಸಲು ಬಂಗಾರದಿಂದ ಕೂಡಿದ್ದು, ಉಳಿದ 268 ಖಾತೆಗಳಲ್ಲಿನ ಚಿನ್ನಾಭರಣಗಳು ನಕಲಿ/ದೋಷಪೂರಿತವಾಗಿರುವುದು ಕಂಡು ಬಂದಿದ್ದು, ಇದನ್ನು ಸರ್ಕಾರದಿಂದ ಅನುಮೋದಿತರಾದ ಚಿನ್ನಾಭರಣ ಮೌಲ್ಯಮಾಪಕರು 430 ಚಿನ್ನಾಭರಣ ಖಾತೆಗಳಿಗೆ ಸಂಬಂಧಿಸಿದ ಚಿನ್ನಾಭರಣಗಳನ್ನು ಪರೀಕ್ಷಿಸಿದ್ದು, 268 ಚಿನ್ನಾಭರಣ ಸಾಲಕ್ಕೆ ಸಂಬಂಧಿಸಿದ ಆಭರಣಗಳು ನಕಲಿ ಚಿನ್ನದ ಆಭರಣಗಳೆಂದು ದೃಢೀಕರಿಸಿ ವರದಿ ಸಲ್ಲಿಸಿರುತ್ತಾರೆ. ಈ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಶಾಖಾ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸಿದ ಶ್ರೀ ದಿಲಿಪ್ ವಲ್ಲಭದಾಸ ತಿಲೋಕಾನಿ ಹಾಗೂ ಶಾಖೆಯ ಚಿನ್ನದ ಆಭರಣಗಳ ಮೌಲ್ಯಮಾಪಕರಾಗಿ ಕೆಲಸ ನಿರ್ವಹಿಸಿದ ಶ್ರೀ ಉಮೇಶ್ ಭೀಮರಾವ್ ಬಾಂಧಿವಾಡೇಕರ್ ಇವರ ವಿರುದ್ಧ ಅಪರಾಧ ಸಂ:28/2015 ರಲ್ಲಿ ಉಧ್ಯಮ ಬಾಗ್ ಪೋಲೀಸ್ ಠಾಣೆಯಲ್ಲಿ

ಕ್ರಿಮಿನಲ್ ಮೊಕದಮ್ಮೆ ದಾಖಲಿಸಲಾಗಿದೆ. ದುರ್ ವ್ಯವಹಾರಕ್ಕೆ ಕಾರಣೀಭೂತರಾದವರ ಹೆಸರು ನಮೂದಿಸಲಾಗಿದೆ. ಚಿನ್ನದ ಆಭರಣಗಳ ಅಡವಿನ ಸಾಲಗಳ ಖಾತೆಗಳ ಬಹುತೇಕ ಪ್ರಕರಣಗಲ್ಲಿ ನಿಯಮವನ್ನು ಉಲ್ಲಂಘಿಸಿರುತ್ತಾರೆ. ಆಭರಣಗಳ ಇಡಿನ ಸಾಲದ ನಿಯಮ 9(9)ರ ಮೇರೆಗೆ ಪ್ರತಿ ಸಾಲ ಪಡೆಯುವಾಗ ಒಂದಕ್ಕಿಂತ ಹೆಚ್ಚು ಚಿನ್ನದ ಸಾಲದ ಖಾತೆಯನ್ನು ಹೊಂದಲು ಅವಕಾಶವಿರುವುದಿಲ್ಲ. ಆದರೆ, ಬ್ಯಾಂಕಿನ ಬಹುತೇಕ ಎಲ್ಲ ಪ್ರಕರಣಗಳಲ್ಲಿ (ಮೇಲೆ ಹೇಳಿದ 268 ಪ್ರಕರಣಗಳಲ್ಲಿ) ಒಬ್ಬ ವ್ಯಕ್ತಿಯ ಚಿನ್ನದ ಮೇಲಿನ ಸಾಲದ ಖಾತೆಯಲ್ಲಿ ಒಂದಕ್ಕಿಂತ ಹೆಚ್ಚು ಚಿನ್ನದ ಸಾಲದ ಖಾತೆಗಳನ್ನು ತೆರೆದು ಹಿಂದಿನ ಸಾಲದ ಮರು ಪಾವತಿ ಬಾಕಿ ಇದ್ದರೂ ಸಹ ಪುನ: ಅನೇಕ ಜಿ.ಎಲ್ ಖಾತೆಗಳ ಮೂಲಕ ಸಾಲ ಮಂಜೂರಿಸಿರುವುದು ಕಂಡು ಬಂದಿರುತ್ತದೆ.

ಆಭರಣಗಳ ಸಾಲ ನಿಯಮ 9ರನ್ವಯ ಸಾಲ ಸುಸ್ತಿಯಾದಲ್ಲಿ ಕೂಡಲೇ ಸಾಲಗಾರನಿಗೆ ಸೂಕ್ತ ತಿಳುವಳಿಕೆ ನೀಡಿ ತಗಾದೆ ಮಾಡಬೇಕಾಗಿದ್ದು, ಹಾಗೆ ತಗಾದೆ ಮಾಡದೆ ಸಾಲ ಮರುಪಾವತಿಗೆ ಕ್ರಮ ಜರುಗಿಸದೇ ಸುಳ್ಳು ಖಾತೆಗಳ ಪ್ರಕರಣಗಳು ಬಹಿರಂಗವಾಗದಂತೆ ನೋಡಿಕೊಳ್ಳುವ ದುರುದ್ದೇಶದಿಂದ ಸಕಾಲದಲ್ಲಿ ಸೂಕ್ತ ಕ್ರಮ ಜರುಗಿಸಿರುವುದಿಲ್ಲ. ಅಡವಿನ ಸಾಲಗಳ ನಿಯಮ 9(6) ರನ್ವಯ ಚಿನ್ನದ ಮೌಲ್ಯದ ಶೇಕಡ 70 ರಷ್ಟು ಮತ್ತು ಬ್ಯಾಂಕಿನವರು ಕಾಲಕಾಲಕ್ಕೆ ನಿಗಧಿಪಡಿಸುವ ಮಿತಿಗೆ ಅನುಗುಣವಾಗಿ ಸಾಲ ಮಂಜೂರು ಮಾಡಬೇಕಾಗಿರುತ್ತದೆ. ಆದರೆ, ಬಹಳಷ್ಟು ಪ್ರಕರಣಗಳಲ್ಲಿ ಶೇ.100 ರಷ್ಟು ಹಾಗೂ ಅದಕ್ಕಿಂತ ಹೆಚ್ಚು ಸಾಲವನ್ನು ಮಂಜೂರು ಮಾಡಿರುವುದು ಕಂಡು ಬಂದಿರುತ್ತದೆ. ಚಿನ್ನದ ಆಭರಣಗಳ ಅಡವಿನ ಸಾಲದ ನಿಯಮ 9(12)(14)ರ ಪ್ರಕಾರ ಶಾಖಾ ವ್ಯವಸ್ಥಾಪಕರು ಅಡವಿಟ್ಟ ಚಿನ್ನಧ ಆಭರಣಗಳನ್ನು ಜಂಟಿ ಸುಪರ್ದಿನಲ್ಲಿ ಇಟ್ಟುಕೊಳ್ಳುವುದು ಕಡ್ಡಾಯವಾಗಿರುತ್ತದೆ. ಆದರೆ, ಪ್ರಸಕ್ತ ಪ್ರಕರಣದಲ್ಲಿ ವ್ಯವಸ್ಥಾಪಕರು ಹಣದ ದುರುಪಯೋಗ ಮಾಡಿಕೊಳ್ಳುವ ಉದ್ದೇಶದಿಂದ ನಿಯಮ ಹಾಗೂ ನಿರ್ದೇಶನಗಳನ್ನು ತಳ್ಳಿ ಹಾಕಿ ವ್ಯಹರಿಸಿರುವುದು ಕಂಡು ಬಂದಿರುತ್ತದೆ. ಶಾಖಾ ವ್ಯವಸ್ಥಾಪಕರು,ಚಿನ್ನದ ಮೌಲ್ಯಮಾಪಕರು, ಕ್ಯಾಶಿಯರ್‌ಗಳು, ಒಬ್ಬರಿಗೊಬ್ಬರು ಶಾಮೀಲಾಗಿ ಚಿನ್ನಾಭರಣದ ಖಾತೆಗಳಿಗೆ ಸಂಬಂಧಿಸಿದಂತೆ ಕಡತಗಳನ್ನು ನಿರ್ವಹಿಸಿರುವುದು ಕಂಡು ಬಂದಿರುತ್ತದೆ. ಶಾಖಾ ವ್ಯವಸ್ಥಾಪಕರು ಮೌಲ್ಯಮಾಪಕರ ಜೊತೆಗೆ ಸೇರಿ ಅವರ ಕುಟುಂಬದ ನಾಲ್ಕು ಜನರನ್ನು ಬಳಸಿಕೊಂಡು 14 ಖಾತೆಗಳ ಮುಖಾಂತರ ರೂ.20.39 ಲಕ್ಷ ಸಾಲ ಮಂಜೂರು

ಮಾಡಿರುವುದು, ನಂತರ ಸದರಿ ನಾಲ್ಕು ವ್ಯಕ್ತಿಗಳು ತಮಗೆ ತೀರ ಹತ್ತಿರವಾದ 29 ಗ್ರಾಹಕರನ್ನು ಬ್ಯಾಂಕಿಗೆ ಪರಿಚಯಿಸಿ ಅವರುಗಳ 126 ಖಾತೆಗಳ ಮುಖಾಂತರ ರೂ.184.57 ಲಕ್ಷ ಸಾಲವನ್ನು ಮಂಜೂರು ಮಾಡಿಕೊಂಡಿದ್ದಾರೆ. ಹೀಗೆ ಒಟ್ಟು 31 ವ್ಯಕ್ತಿಗಳಿಗೆ 140 ಖಾತೆಗಳ ಮುಖಾಂತರ ನೀಡಿದ ಸಾಲದ ಒಟ್ಟು ಮೊತ್ತ 204.96 ಲಕ್ಷ ಆಗಿರುತ್ತದೆ. ಈ ರೀತಿ ಸಾಲವನ್ನು ಮಂಜೂರು ಮಾಡಿ ಬ್ಯಾಂಕಿಗೆ ಆರ್ಥಿಕ ಕೊರತೆಯನ್ನು ಉಂಟು ಮಾಡಿರುತ್ತಾರೆ. 268 ಚಿನ್ನದ ಸಾಲದ ಬಹುತೇಕ ಅರ್ಜಿಗಳನ್ನು ಹಾಗೂ ಸಂಬಂಧಪಟ್ಟ ವಿತ್‌ಡ್ರಾಯಿಲ್ ಸ್ಲಿಪ್‌ಗಳನ್ನು ಶಾಖಾ ವ್ಯವಸ್ಥಾಪಕರೇ ಭರ್ತಿ ಮಾಡಿರುವುದೇ ಕಂಡು ಬಂದಿರುತ್ತದೆ. ಸಾಲ ಮಂಜೂರಾತಿ, ಸಾಲದ ಹಣ ಪಡೆಯುವುದು ಈ ಎಲ್ಲ ಪ್ರಕಿಯೆಗಳು ಒಂದೇ ದಿನದಲ್ಲಿ ಜರುಗಿರುವುದು ಕಂಡು ಬಂದಿರುತ್ತದೆ. ಆಭರಣದ ಮೇಲಿನ ಸಾಲ ಮುಕ್ತಾಯಗೊಂಡ ನಂತರ ಖಾತೆಗಳನ್ನು ಮುಕ್ತಾಯಗೊಳಿಸಿದ್ದರೂ ಆಭರಣಗಳನ್ನು ಹಿಂದಿರುಗಿಸಿದ ಬಗ್ಗೆ ಯಾವುದೇ ಪುರಾವೆಗಳು ಇರುವುದಿಲ್ಲ ಇದರಿಂದಲೂ ಸಹ ಶಾಖಾ ವ್ಯವಸ್ಥಾಪಕರು, ಮೌಲ್ಯಮಾಪಕರು, ಸಿಬ್ಬಂದಿವರ್ಗದವರು ಹಣ ದುರುಪಯೋಗಪಡಿಸಿಕೊಳ್ಳುವಲ್ಲಿ ಶಾಮೀಲಾಗಿರುವುದು ಕಂಡು ಬಂದಿರುತ್ತದೆ. ಈ ಅವ್ಯವಹಾರಗಳಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಆಡಳಿತ ಮಂಡಳಿಯ ಸದಸ್ಯರುಗಳು ಸಹ ಜವಾಬ್ಧಾರಿಯುತರಾಗಿರುತ್ತಾರೆ

6. ಸದರಿ ವರದಿಯ ಆಧಾರದ ಮೇಲೆ 5 ರಿಂದ 24ನೇ ಎದುರುದಾರರನ್ನು ಎದುರುದಾರರನ್ನಾಗಿ ಮಾಡಿ ಸದರಿಯವರ ವಿರುದ್ಧ ಪರಿವೀಕ್ಷಣಾ ಟಿಪ್ಪಣಿ ತಯಾರಿಸಿ ಆಕ್ಷೇಪಣೆಗಳನ್ನು ಪಡೆಯಲಾಗಿರುತ್ತದೆ.

7. **1ನೇ ಎದುರುದಾರರ ಆಕ್ಷೇಪಣೆ:-**

ಬೆಳಗಾಂ ಇಂಡಸ್ಟ್ರಿಯಲ್ ಕೋಆಪರೇಟಿವ್ ಬ್ಯಾಂಕ್ ಲಿಮಿಟೆಡ್ ನ ನೌಕರರಾಗಿದ್ದು, ಬ್ಯಾಂಕಿನಲ್ಲಿ ಬಂಗಾರ ಸಾಲಕ್ಕೆ ಸಂಬಂಧಪಟ್ಟಂತೆ ಅಧಿಕಾರ ಮತ್ತು ಹಣ ದುರುಪಯೋಗ ಪಡಿಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದೂರು ದಾಖಲಾದ ತಕ್ಷಣ ಬ್ಯಾಂಕಿನವರು ಸಂಬಂಧಪಟ್ಟ ಅಧಿಕಾರಿಗಳನ್ನು ವಿಚಾರಣೆ ಮಾಡಿ ತನಿಖೆ ಮಾಡಲು ಆದೇಶ ಮಾಡಿರುತ್ತಾರೆ. ಸಂಬಂಧಪಟ್ಟ ಖಾತಾ ವ್ಯವಹಾರವನ್ನು ಬ್ಯಾಂಕಿನವರು ಸ್ಥಗಿತಗೊಳಿಸಿರುತ್ತಾರೆ. ಸದರಿ ಬಂಗಾರದ ಸಾಲದ ಖಾತೆಯ ಅರ್ಜಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದು

ತನಿಖೆಗೆ ಆದೇಶಿಸಿರುತ್ತಾರೆ. ಕಲಂ 64ರ ಸಹಕಾರ ಸಂಘಗಳ ಅಧಿನಿಯಮ 1959ರ ರೀತ್ಯಾ ವಿಚಾರಣೆ ಪ್ರಾರಂಭವಾಗಿರುತ್ತದೆ. ಇಲಾಖಾ ವಿಚಾರಣಾ ಹಂತದಲ್ಲಿ ದುರುಪಯೋಗಪಡಿಸಿದ ಹಣವನ್ನು ಖಾತೆದಾರರಿಂದ ಹಾಗೂ ಬಂಗಾರದ ಬೆಲೆ ನಿಗಧಿಪಡಿಸುವವರಿಂದ ಹಾಗೂ ಬ್ಯಾಂಕಿನನ ವ್ಯವಸ್ಥಾಪಕರಿಂದ ಹಣ ವಸೂಲಿಗೆ ಇಲಾಖೆಯಲ್ಲಿ ಕ್ರಮ ಜರುಗಿಸಲಾಗಿರುತ್ತದೆ. ಅಡಮಾನ ಸಾಲದ ಶಾಖೆಯಲ್ಲಿ ನಾನು ಕರ್ತವ್ಯ ನಿರ್ವಹಿಸಿಲ್ಲ ಹಾಗೂ ಸದರಿ ಬ್ಯಾಂಕಿನ ದಾಖಲೆಗಳು ನನ್ನ ವಶದಲ್ಲಿ ಇರಲಿಲ್ಲ. ಸದರಿ ಉಧ್ಯಮಬಾಗ್ ಶಾಖೆಯಲ್ಲಿ ತಾನು ಎಂದೂ ಕರ್ತವ್ಯ ನಿರ್ವಹಿಸಿಲ್ಲ. ಸದರಿ ದುರುಪಯೋಗದ ಬಗ್ಗೆ ಬ್ಯಾಂಕಿನವರು ಈಗಾಗಲೇ ಇಲಾಖಾ ವಿಚಾರಣಣೆ ಕೈಗೊಂಡಿರುತ್ತಾರೆ. ಅಡಮಾನ ಸಾಲದ ಖಾತೆಯು ನನ್ನದಿರುವುದಿಲ್ಲ ಹಾಗೂ ನನ್ನ ಸಂಬಂಧಿಕರದ್ದೂ ಇರುವುದಿಲ್ಲ.

ಬೋಗಸ್ ಖಾತೆದಾರರ ಹೆಸರಿನಲ್ಲಿ ನಡೆದ ಅವ್ಯವಹಾರದ ಬಗ್ಗೆ ಕ್ರಿಮಿನಲ್ ಪ್ರಕರಣ ಅಡಿ.ಓಂ28/15 ದಾಖಲಾಗಿದ್ದು ತನಿಖಾ ಹಂತದಲ್ಲಿರುತ್ತದೆ. ಸದರಿ ಕ್ರಿಮಿನಲ್ ಪ್ರಕರಣವು ನನ್ನ ವಿರುದ್ಧ ದಾಖಲಾಗಿರುವುದಿಲ್ಲ ಎಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ.

8. <u>3ನೇ ಎದುರುದಾರರ ಆಕ್ಷೇಪಣೆ:</u>

ನನ್ನ ವಿರುದ್ಧ ಂಖಅಖ ರವರ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ: 2296/2014-15 ಹಾಗೂ ಕ್ರಿಮಿನಲ್ ಪ್ರಕರಣ ಸಂಖ್ಯೆ:28/15 ದಾಖಲಾಗಿದ್ದು ವಿಚಾರಣಾ ಹಂತದಲ್ಲಿರುತ್ತದೆ. ಏಂಖ ಯಲ್ಲಿ ನಂ.189/15 ಪ್ರಕರಣ ಹಾಗೂ ಉಚ್ಛ ನ್ಯಾಯಾಲಯ, ಧಾರವಾಡದಲ್ಲಿ ಅಡಿಟ.ಕಓಂ100737/15 ಸಹ ದಾಖಲಾಗಿರುತ್ತದೆ. ದೂರಿನಲ್ಲಿರುವ ಆರೋಪಗಳು ನಿರಾಕರಿಸಲು ಯೋಗ್ಯವಾಗಿರುತ್ತದೆ ಹಾಗೂ ದಾಖಲೆಗಳಲ್ಲಿರುವುದು ನನ್ನ ಸಹಿಗಳು ಸ್ವ ಇಚ್ಛೆಯಿಂದ ಹಾಕಿದವುಗಳಲ್ಲ ಮಾನಸಿಕ ಮತ್ತು ದೈಹಿಕ ಒತ್ತಡ ಉಂಟು ಮಾಡಿ, ಸದರಿ ದಾಖಲೆಗಳಿಗೆ ಸಹಿ ಪಡೆದಿರುತ್ತಾರೆ. ರೂ.4.00 ಕೋಟಿ ಅವ್ಯವಹಾರಕ್ಕೂ ನನಗೂ ಯಾವುದೇ ಸಂಬಂಧವಿರುವುದಿಲ್ಲ ಎಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ.

9. <u>4ನೇ ಎದುರುದಾರರವರ ಆಕ್ಷೇಪಣೆ:-</u>

ಬ್ಯಾಂಕಿನ ಚುನಾಯಿತ ನಿರ್ದೇಶಕರು ಆರಿಸಿ ನನ್ನನ್ನು ಅಧ್ಯಕ್ಷರನ್ನಾಗಿ ಮಾಡಿರುತ್ತಾರೆ. ಬ್ಯಾಂಕಿನ ಕಾರ್ಯಕಾರಿ ಮಂಡಳಿಯ ತೀರ್ಮಾನದಂತೆ ಬ್ಯಾಂಕಿನ

ವ್ಯವಹಾರಗಳು ನಡೆಯುತ್ತಿದ್ದವು. ಬ್ಯಾಂಕಿನ ವ್ಯವಸ್ಥಾಪಕರು ಮತ್ತು ಬಂಗಾರದ ಮೌಲಿಕರು ಸೇರಿ ಅವ್ಯವಹಾರ ನಡೆಸಿರುತ್ತಾರೆ. ಸದರಿ ಅವ್ಯವಹಾರದ ಬಗ್ಗೆ ಕಲಂ 64ರ ಕರ್ನಾಟಕ ಸಹಕಾರ ಸಂಘದ ಕಾಯ್ದೆ ರೀತ್ಯಾ ಇಲಾಖಾ ವಿಚಾರಣೆಯು ಪ್ರಾರಂಭವಾಗಿರುತ್ತದೆ. ಹಣ ವಸೂಲಾತಿಗೂ ಬ್ಯಾಂಕಿನವರು ಕ್ರಮ ಜರುಗಿಸಿರುತ್ತಾರೆ. ಅಡಮಾನ ಖಾತೆಯು ನನ್ನ ಹೆಸರಿಗಾಗಲಿ ಅಥವಾ ನನ್ನ ಸಂಬಂಧಿಕರ ಹೆಸರಿಗಾಗಲಿ ಇರುವುದಿಲ್ಲ ಎಂದು ತಮ್ಮ ಆಕ್ಷೇಪಣೆ ಸಲ್ಲಿಸಿರುತ್ತಾರೆ.

10. <u>5ನೇ ಎದುರುದಾರರ ಆಕ್ಷೇಪಣೆ:-</u>

ನಾನು ಬ್ಯಾಂಕಿನ ಪ್ರಭಾರಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಪ್ರಭಾರ ವಹಿಸಿಕೊಂಡ ಕೆಲವೇ ಅವಧಿಯಲ್ಲಿ ಈ ಅವ್ಯವಹಾರದ ಬಗ್ಗೆ ಬಯಲಿಗೆ ತರಲು ಪ್ರಯತ್ನಿಸಿರುತ್ತೇನೆ.

ಉದ್ಯಮಭಾಗ ಶಾಖೆಯಲ್ಲಿ ನಡೆದಿದೆ ಎನ್ನಲಾದ ನಕಲಿ ಬಂಗಾರದ ಅಡವಿನ ಸಾಲದಲ್ಲಿ ಅವ್ಯವಹಾರವನ್ನು ಬೆಳಕಿಗೆ ತಂದಿರುವುದು ನನ್ನ ಅಧಿಕಾರಾವಧಿಯಲ್ಲಿ ಶಾಖೆಗೆ ಭೇಟಿ ನೀಡಿ ಬಂಗಾರ ಸಾಲದ ಹಂಚಿಕೆಯಲ್ಲಿ ಸಂಶಯ ವ್ಯಕ್ತವಾಗಿರುವುದರಿಂದ ಖಡೆ ಬಜಾರ ಶಾಖೆಯ ಬಂಗಾರ ಮೌಲ್ಯಮಾಪಕರಿಂದ ಬಂಗಾರದ ಶುದ್ಧತೆಯ ಕುರಿತು ಪರಿಶೀಲನೆ ಕೈಗೊಳ್ಳಲಾಗಿ ಶಾಖೆಯಲ್ಲಿ ನಕಲಿ ಬಂಗಾರದ ಆಭರಣಗಳ ಅಡಮಾನದ ಮೇಲೆ ಸಾಲ ಹಂಚಿಕೆಯಾಗಿದೆ ಎಂದು ನಾನು ಬ್ಯಾಂಕಿನ ಅಧ್ಯಕ್ಷರಿಗೆ ಲಿಖಿತ ವರದಿಯನ್ನು ನೀಡಿರುತ್ತೇನೆ. ನನ್ನ ಲಿಖಿತ ವರದಿಯನ್ನು ಆಧರಿಸಿ ಹುಬ್ಬಳ್ಳಿಯ ಸರಕಾರಿ ಬಂಗಾರ ಮೌಲ್ಯಮಾಪಕರನ್ನು ನೇಮಕ ಮಾಡಿ ಎಲ್ಲ ಶಾಖೆಯ ಬಂಗಾರದ ಆಭರಣಗಳ ಪರಿಶುದ್ದತೆಯನ್ನು ತಾಂತ್ರಿಕವಾಗಿ ಪರೀಕ್ಷೆಗೆ ಒಳಪಡಿಸಿ ಬಂಗಾರದ ಪರಿಶುದ್ಧತೆಯನ್ನು ಪರೀಕ್ಷಿಸಿದಾಗ ಉದ್ಯಮಭಾಗ ಶಾಖೆಯಲ್ಲಿ 268 ಸಾಲ ಖಾತೆಗಳಲ್ಲಿ ನಕಲಿ ಬಂಗಾರದ ಆಭರಣಗಳ ಅಡವಿನ ಮೇಲೆ ಸಾಲ ಹಂಚಿಕೆಯಾಗಿರುವುದಾಗಿ ಮೌಲ್ಯಮಾಪಕರು ದೃಢೀಕರಿಸಿರುತ್ತಾರೆ.

ಇದು ಬೆಳಕಿಗೆ ಬಂದ ನಂತರ ಶಾಖಾ ವ್ಯವಸ್ಥಾಪಕರು ಹಾಗೂ ಮೌಲ್ಯಮಾಪಕರು ಇವರ ವಿರುದ್ಧ ಅಪರಾಧ ಸಂಖ್ಯೆ:28/2015ರಲ್ಲಿ ಉದ್ಯಮಭಾಗ ಪೋಲಿಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮ್ಮೆ ದಾಖಲು ಮಾಡಿರುತ್ತೇನೆ ಹಾಗೂ ಇಬ್ಬರ ಮೇಲೆ ಕರ್ನಾಟಕ ಸಹಕಾರ

ಸಂಘಗಳ ಕಾಯ್ದೆ ಕಲಂ 70 ರಡಿಯಲ್ಲಿ ದಾವಾ ದಾಖಲಿಸಲಾಗಿದೆ ಇದು ವಿಚಾರಣಾ ಹಂತದಲ್ಲಿರುತ್ತದೆ.

ನಕಲಿ ಬಂಗಾರದ ಆಭರಣಗಳ ಮೇಲೆ ಸಾಲ ಹಂಚಿಕೆಯಾಗಿದೆ ಎಂದು ತೋರಿಸಲಾದ 268 ಪ್ರಕರಣಗಳಲ್ಲಿ ಹೊಸ ಸಾಲ ನೀಡಿದೆ ಎಂದು ತೋರಿಸುವ ಉದ್ದೇಶದಿಂದ ಹಿಂದಿನ ಸಾಲಕ್ಕೆ ಹೊಂದಾಣಿಕೆ ಮಾಡಿರುವ ಕುರಿತು 2014-15ನೇ ಸಾಲಿನ ಆಂತರಿಕ/ಅಂತಿಮ ಲೆಕ್ಕ ಪರಿಶೋಧನಾ ವರದಿಯಲ್ಲಿ ಸ್ಪಷ್ಟೀಕರಣ ನೀಡಲಾಗಿರುತ್ತದೆ. ಶಾಖಾ ವ್ಯವಸ್ಥಾಪಕರು ಬಂಗಾರದ ಆಭರಣಗಳ ಅಡವಿನ ಸಾಲದ ಘಟನೋತ್ತರ ಮಂಜೂರಿಗಾಗಿ ಸಿಇಓ ಇವರ ಮುಖಾಂತರ ಆಡಳಿತ ಮಂಡಳಿಯ ಸಭೆಯಲ್ಲಿ ಮಂಡನೆಗಾಗಿ ಸಲ್ಲಿಸಿರುತ್ತಾರೆ. ಸಿಇಓ ಇವರು ಶಾಖಾ ವ್ಯವಸ್ಥಾಪಕರು ಕಳುಹಿಸಿದ ಸಾಲಗಾರರ ಯಾದಿಯನ್ನು ಮಂಜೂರಿಗಾಗಿ ಆಡಳಿತ ಮಂಡಳಿಯ ಸಭೆಯಲ್ಲಿ ಚರ್ಚೆಗೆ ಮಂಡಿಸುವುದಷ್ಟೇ ಇವರ ಕರ್ತವ್ಯವಾಗಿರುತ್ತದೆ. ಹೀಗಿರುವಾಗ ನಾನು ಈ ಅವ್ಯವಹಾರಕ್ಕೆ ವೈಯಕ್ತಿಕ ಜವಾಬ್ದಾರನಾಗಿರುವುದಿಲ್ಲ ಎಂಬ ಕುರಿತು ಸ್ಪಷ್ಟೀಕರಣ ನೀಡಿರುತ್ತಾರೆ.

ಬಂಗಾರದ ಅವ್ಯವಹಾರದಲ್ಲಿ ಭಾಗಿದಾರರೆಂದು ಶಿಸ್ತು ಕ್ರಮಕ್ಕಾಗಿ ಸಿಬ್ಬಂದಿಗಳನ್ನು ಅಮಾನತ್ತಿನಲ್ಲಿಟ್ಟು ಗೃಹ ವಿಚಾರಣೆಗಳಿಗೆ ಒಳಪಡಿಸಿ ಗೃಹ ವಿಚಾರಣಾ ವರದಿಯನ್ನು ಆಧರಿಸಿ ಕಾನೂನು ಸಲಹೆ ಪಡೆದು ಎಲ್ಲ ಸಿಬ್ಬಂದಿಗಳನ್ನು ಬ್ಯಾಂಕಿನ ಶಿಸ್ತು ಪ್ರಾಧಿಕಾರದ ಮೂಲಕ ಸೇವೆಯಿಂದ ವಜಾ ಮಾಡಲಾಗಿದೆ.

ಬ್ಯಾಂಕಿನ ಉದ್ಯಮಭಾಗ ಶಾಖೆಯಲ್ಲಿ ಸನ್ 2011 ರಿಂದ ನಕಲಿ ಬಂಗಾರದ ಅವ್ಯವಹಾರವು ಯಾವುದೇ ಅಡತಡೆ ಇಲ್ಲದೇ 2015 ರ ವರೆಗೆ ನಡೆಸಿಕೊಂಡು ಬಂದಿರುತ್ತಾರೆ. ನಾನು ಈ ಅವ್ಯವಹಾರವನ್ನು ಬೆಳಕಿಗೆ ತರಲು ಕಾರಣ ಕರ್ತೃ ಆಗಿರುತ್ತೇನೆ. ಶಾಸನಬದ್ಧ ವಿಚಾರಣಾ ಅಂಶಗಳು ನಾನು ಬ್ಯಾಂಕಿನ ಪ್ರಭಾರಿ ಮುಖ್ಯಕಾರ್ಯನಿರ್ವಹಣಾ ಅಧಿಕಾರಿಯಾಗಿ ಪ್ರಭಾರ ವಹಿಸಿಕೊಂಡ ದಿ.18/07/2014 ಕ್ಕಿಂತ ಮುಂಚಿತ ಅವಧಿಯ ವ್ಯವಹಾರಗಳಾಗಿರುತ್ತವೆ. ಈ ವಿಚಾರಣೆಯಿಂದ ಕೈಬಿಡಲು ವಿನಂತಿಸಿರುತ್ತಾರೆ.

11. **6ನೇ ಎದುರುದಾರರ ಆಕ್ಷೇಪಣೆ:-**

ದೂರಿನ ಅಂಶಗಳೆಲ್ಲವು ತನಗೆ ಸಂಬಂಧಪಟ್ಟದ್ದು ಇರುವುದಿಲ್ಲ. ಬೆಳಗಾವಿ ಔದ್ಯೋಗಿಕ ಸಹಕಾರಿ ಬ್ಯಾಂಕ್ ಬೆಳಗಾವಿಯಲ್ಲಿ ಗ್ರೂಪ್-ಡಿ ನೌಕರನೆಂದು ಸೇವೆಗೆ ದಿನಾಂಕ

01/02/1995ರಂದು ಹಾಜರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದೇನೆ. ಉತ್ತಮ ಸೇವೆಯನ್ನು ಗಣನೆಗೆ ತೆಗೆದುಕೊಂಡು ಬ್ಯಾಂಕಿನ ಆಡಳಿತ ಮಂಡಳಿಯವರು ದಿನಾಂಕ 01/08/2012 ರಂದು ತನ್ನನ್ನು ಕಿರಿಯ ಸಹಾಯಕರ ಹುದ್ದೆಗೆ ಬಡ್ತಿ ನೀಡಿ ಬ್ಯಾಂಕಿನ ಉದ್ಯಮಭಾಗ ಶಾಖೆಯಲ್ಲಿ ಕಾರ್ಯನಿರ್ವಹಿಸಲು ನಿಯುಕ್ತಿಗೊಳಿಸಿದ್ದು, ದಿನಾಂಕ 18/11/2014 ವರೆಗೆ ಸದರಿ ಶಾಖೆಯಲ್ಲಿ ಕಾರ್ಯನಿರ್ವಹಿಸಿರುತ್ತೇನೆ. ನಂತರ ತನ್ನನ್ನು ಬ್ಯಾಂಕಿನ ಮುಖ್ಯ ಕಛೇರಿಗೆ ವರ್ಗಾವಣೆ ಮಾಡಿರುತ್ತಾರೆ. ತಾನು ನಿರ್ವಹಿಸಿದ ತನ್ನ ಸೇವಾ ಅವಧಿಯಲ್ಲಿ ಯಾವುದೇ ರೀತಿಯ ದುರ್ನಡತೆ ಅವ್ಯವಹಾರಗಳನ್ನು ಮಾಡಿರುವುದಿಲ್ಲ. ತನಗೆ ನಿರ್ವಹಿಸಿದ ಕೆಲಸ ಕಾರ್ಯಗಳನ್ನು ಶಾಖಾಧಿಕಾರಿಗಳ ಮೌಖಿಕ ನಿರ್ದೇಶನದ ಮೇರೆಗೆ ನಿರ್ವಹಿಸಿದ್ದು ಇರುತ್ತದೆ. ತನಗೆ ಬಂಗಾರದ ಆಭರಣಗಳ ಅಡಮಾನ ಸಾಲದ ವ್ಯವಹಾರ ತನಗೆ ಗೊತ್ತಿರುವುದಿಲ್ಲ ಮತ್ತು ಬಂಗಾರದ ಅಡಮಾನ ಸಾಲದ ಹಾನಿ, ವಂಚನೆ ಮತ್ತು ಮೋಸದ ವಿಷಯ ತನ್ನ ಗಮನಕ್ಕೆ ಬಂದಿರುವುದಿಲ್ಲ. ಸದರಿ ವ್ಯವಹಾರದಲ್ಲಿ ತನ್ನದು ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ಆದ್ದರಿಂದ, ಸದರಿ ವ್ಯವಹಾರಕ್ಕೆ ಸಂಬಂಧಿಸಿದ ಹಾನಿ, ವಂಚನೆ ಮೋಸಕ್ಕೆ ತಾನು ಯಾವುದೇ ರೀತಿಯಿಂದ ಜವಾಬ್ದಾರನಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಬ್ಯಾಂಕಿನ ಉಪನಿಯಮಗಳು ಹಾಗೂ ಕಾನೂನಿನ ಪ್ರಕಾರ ಬ್ಯಾಂಕಿನಲ್ಲಿ ಬಂಗಾರ ಆಭರಣಗಳ ಅಡಮಾನ ಸಾಲ ನೀಡುವ ಅಧಿಕಾರ ಕೇವಲ ಬ್ಯಾಂಕಿನ ಶಾಖಾ ವ್ಯವಸ್ಥಾಪಕರಿಗೆ ಇದ್ದು, ಸದರಿ ಅಡಮಾನಕ್ಕಾಗಿ ಬಂದ ಆಭರಣಗಳನ್ನು ಪರಿಶೀಲಿಸುವುದು, ಅವುಗಳ ಗುಣಮಟ್ಟವನ್ನು ಪ್ರಮಾಣೀಕರಿಸುವುದು ಮತ್ತು ಬೆಲೆಯನ್ನು ನಿರ್ಧರಿಸುವುದು ಬ್ಯಾಂಕಿನಿಂದ ನೇಮಕಗೊಂಡ ಮೌಲ್ಯಮಾಪಕರ ಜವಾಬ್ದಾರಿ ಇರುತ್ತದೆ. ಅದು ಅಲ್ಲದೇ ಸದರಿ ಬಂಗಾರದ ಆಭರಣಗಳ ಸುರಕ್ಷತೆ ಮತ್ತು ಭದ್ರತೆಯ ಜವಾಬ್ದಾರಿ ಕೇವಲ ಶಾಖಾಧಿಕಾರಿಗಳಿಗೆ ಸಂಬಂಧಪಟ್ಟದ್ದು ಇರುತ್ತದೆ. ಸದರಿ ಬಂಗಾರದ ಆಭರಣಗಳ ಅಡಮಾನದ ವ್ಯವಹಾರಕ್ಕೆ ನನ್ನದು ಯಾವುದೇ ರೀತಿಯಿಂದ ಸಂಬಂಧ ಬರುವುದಿಲ್ಲ. ನಾನೊಬ್ಬ ಬ್ಯಾಂಕಿನ ಕೆಳದರ್ಜೆಯ ನೌಕರನಾಗಿದ್ದು, ನನ್ನ ಮನವಿಯನ್ನು ಕಾನೂನಿನ ಚೌಕಟ್ಟಿನಲ್ಲಿ ಪರಿಶೀಲಿಸಿ ಮೇಲೆ ವಿವರಿಸಿದ ಸತ್ಯಾಂಶಗಳನ್ನು ಹಾಗೂ ನಿಜ ಸ್ಥಿತಿಯನ್ನು ಪರಿಗಣಿಸಲು ಕೋರಿ ಆಕ್ಷೇಪಣೆ ಸಲ್ಲಿಸಿರುತ್ತಾರೆ.

12. 7ನೇ ಎದುರುದಾರರ ಆಕ್ಷೇಪಣೆ:-

ಉದ್ಯಮಭಾಗ ಶಾಖೆಯಲ್ಲಿ ಕಿರಿಯ ಸಹಾಯಕನೆಂದು ದಿನಾಂಕ 13/07/2012 ರಿಂದ 23/11/2014 ರವರೆಗೆ ಕಾರ್ಯನಿರ್ವಹಿಸಿರುವೆನು. ನನಗೆ ಉದ್ಯಮಭಾಗ ಶಾಖೆಗೆ ಕೆಲಸಕ್ಕೆ ಹಾಜರಾಗುವಾಗ ನಿಖರವಾಗಿ ಇಂತಹದೆ ಹುದ್ದೆಯ ಕಾರ್ಯಕ್ಕೆಂದು ನಮೂದಿಸದೆ ವರ್ಗಾವಣೆ ಮಾಡಿದ ನಿಮಿತ್ಯ ಶಾಖೆಯ ಕಾರ್ಯನಿರ್ವಾಹಕರ ಮೌಖಿಕ ಆದೇಶದಂತೆ ಆ ಶಾಖೆಯ ಕ್ಯಾಶಿಯರ ಹುದ್ದೆ ಪ್ರಭಾರವನ್ನು ನನಗಿಂತಲೂ ಪೂರ್ವದಲ್ಲಿ ಶಾಖೆಯ ಕ್ಯಾಶಿಯರ ಹುದ್ದೆ ನಿರ್ವಹಿಸುತ್ತಿದ್ದ ಶ್ರೀ ಸುರೇಂದ್ರ ಕಲ್ಯಾಣಕರ ಇವರಿಂದ ಕ್ಯಾಶಿಯರ್ ಕಾರ್ಯ ಪ್ರಭಾರ ವಹಿಸಿ ನನ್ನ ಕಾರ್ಯ ಪ್ರಾರಂಭಿಸಿದೆನು. ನಾನು ವಿಚಾರಣಾ ಅಧಿಕಾರಿಗಳಿಗೆ ತಿಳಿಸಿದಂತೆ ನನಗೆ ಲಿಖಿತದಲ್ಲಿ ಕ್ಯಾಶಿಯರ್ ಹುದ್ದೆ ಕಾರ್ಯ ಮಾಡಲು ಆದೇಶ ಇರುವುದಿಲ್ಲ ಮತ್ತು ನಾನು ನಿರ್ವಹಿಸಿದ ಕಾರ್ಯದಲ್ಲಿ ಯಾವ ಯಾವ ಕಾರ್ಯವನ್ನು ಹೇಗೆ ನಿರ್ವಹಿಸಬೇಕೆಂಬ ವಿವರವು ಇಲ್ಲದೇ ಇರುವುದರಿಂದ ಈ ಹಿಂದೆ ಹುದ್ದೆಯಲ್ಲಿದ್ದವರಿಂದ ಕಾರ್ಯದ ವಿವರ ಪಡೆದು ಆ ರೀತಿ ಕಾರ್ಯನಿರ್ವಹಿಸಿರುವೆನು.

ಬಂಗಾರ ಸಾಲಗಳ ಬಟವಡೆ ವ್ಯವಹಾರದಲ್ಲಿ ಶಾಖಾ ವ್ಯವಸ್ಥಾಪಕರು ನೇರವಾಗಿ ಆಯಾ ಗ್ರಾಹಕರಿಂದ ಬಂಗಾರದ ಸಾಲದ ಅರ್ಜಿಯನ್ನು ಸ್ವತ: ತುಂಬಿ ಅದರಲ್ಲಿಯ ಎಲ್ಲ ವಿವರವನ್ನು ಸಹಿತ ಪರಿಶೀಲನೆ ಗೈರು ಅಡಮಾನ ಮಾಡುವ ಬ್ಯಾಂಕಿನ ಮೌಲ್ಯಮಾಪಕರ ಸಮಕ್ಷಮ ಪರಿಶೀಲಿಸಿ ಅದರ ಮೌಲ್ಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡುತ್ತಿದ್ದರು. ಇದರಲ್ಲಿ ಪೂರ್ಣತ: ಅವರದೇ ಅಧಿಕಾರವಿದ್ದ ಕಾರಣ ಯಾವುದೇ ರೀತಿಯಿಂದ ನನ್ನ ಕಾರ್ಯ ಸಹಾಯಕ ಇದರಲ್ಲಿ ಅವಶ್ಯಕತೆ ಇದ್ದಿಲ್ಲ. ಕಾರಣ ಸಾಲದ ಸಂಬಂಧಿ ಬಂಗಾರದ ಮೌಲ್ಯ ವ ಚಿನ್ನದ ಶುದ್ಧತೆ ಕುರಿತು ನನ್ನದು ಯಾವುದೇ ವ್ಯವಹಾರದಲ್ಲಿ ಪರಿಗಣಿಸುವ ಅವಶ್ಯಕತೆ ಇರುವುದಿಲ್ಲ. ಆದುದರಿಂದ, ಬಂಗಾರದ ಶುದ್ಧತೆ, ನೈಜತೆ, ಮೌಲ್ಯ ಕುರಿತು ಯಾವುದೇ ರೀತಿಯ ಸಂಬಂಧ ನನ್ನ ಕಾರ್ಯಕ್ಕೆ ಸಂಬಂಧಪಡುವುದಿಲ್ಲ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 109 (15) ದಲಿ ನಮೂದಿಸಿದ ಯಾವುದೇ ಅಪರಾಧವನ್ನು ಎಸಗಿರುವುದಿಲ್ಲವೆಂದು ಈಗಾಗಲೇ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಅವರು ಕಾರಣ ಕೇಳಿಕೊಟ್ಟ ನೋಟೀಸ್ ದಿನಾಂಕ 28/05/2015ರ ಮೇರೆಗೆ ಉತ್ತರವನ್ನು ದಿನಾಂಕ 09/06/2015 ರಂದು ತಿಳಿಸಿರುವೆನು.

ಬ್ಯಾಂಕಿನ ಉಪವಿಧಿಗಳು ಹಾಗೂ ಸೇವಾ ನಿಯಮ ಇತರ ನಿಯಮಾವಳಿಗಳಂತೆ ತಮ್ಮ ಕರ್ತವ್ಯವನ್ನು ಆಡಳಿತ ಮಂಡಳಿಯು ಕೂಡಲೇ ಉಪವಿಧಿಗಳ ಮೇರೆಗೆ ನಿರ್ವಹಿಸುವ ಕರ್ತವ್ಯದಂತೆ ಸಂಬಂಧಿಸಿದ ಶಾಖಾ ವ್ಯವಸ್ಥಾಪಕ ಮತ್ತು ಮೌಲ್ಯಮಾಪಕ ಇವರ ಮೇಲೆ ಮತ್ತು ಸ್ವತ: ತಾವು ನಿರ್ವಹಿಸುವ ಕಾರ್ಯದ ಮೇಲೆ ನಿಗಾವಹಿಸಿ ಕಾರ್ಯನಿರ್ವಹಿಸದೇ ಇದ್ದುದರಿಂದ ಇಂತಹ ಪ್ರಕರಣಗಳು ಜರಗಲು ಆಸ್ಪದವಾಗಿರುವುದೇ ವಿನಹ ನನ್ನ ಯಾವುದೇ ಕಾರ್ಯಕ್ಕೆ ಸಂಬಂಧ ಪಡುವುದಿಲ್ಲ. ಕಾರಣ, ಆಡಳಿತ ಮಂಡಳಿ ಪ್ರಧಾನ ವ್ಯವಸ್ಥಾಪಕರು ಶಾಖಾ ಉಪಸಮಿತಿ ಶಾಖಾ ಕಾರ್ಯದ ಬಗ್ಗೆ ಪರಿಣಾಮಕಾರಿ ನಿಯಂತ್ರಣ ಮೇಲ್ವಿಚಾರಣೆ ಮಾಡದೇ ಇದ್ದುದರಿಂದಾಗಿ ಬಂಗಾರದ ವ್ಯವಹಾರದಲ್ಲಿ ಶಾಖಾ ವ್ಯವಸ್ಥಾಪಕ ಮತ್ತು ಮೌಲ್ಯಮಾಪಕ ಶಾಮಿಲಾಗಿ ಗ್ರಾಹಕರನ್ನು ಬಳಸಿಕೊಂಡು ಹಾಗೂ ಶಾಖಾ ವ್ಯವಸ್ಥಾಪಕ ತನ್ನ ಕೈಕೆಳಗಿನ ಸಿಬ್ಬಂದಿಯನ್ನು ತನ್ನ ಹುದ್ದೆಯ ಪ್ರಭಾವ ಬಳಸಿಕೊಂಡು ಬ್ಯಾಂಕಿನಲ್ಲಿ ಅವ್ಯವಹಾರ ಮಾಡಿದ್ದು ಇರುತ್ತದೆ ವಿನ: ನನ್ನದು ಇದರಲ್ಲಿ ಯಾವುದೇ ಪಾತ್ರ ಇರುವುದಿಲ್ಲ ಎಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ.

13. **8ನೇ ಎದುರುದಾರರ ಆಕ್ಷೇಪಣೆ:-**

ಉದ್ಯಮಭಾಗ ಶಾಖೆಯಲ್ಲಿ ದಿನಾಂಕ 20/06/2011 ರಿಂದ 08/12/2014ರ ಅವಧಿಯವರೆಗೆ ಕಾರ್ಯನಿರ್ವಹಿಸಿರುವೆನು. ಸದರಿ ಅವಧಿಯಲ್ಲಿ ಪ್ರಭಾರಿ ಸಹಾಯಕ ಲೆಕ್ಕಿಗನೆಂದು ಹಾಗೂ ದಿನಾಂಕ 01/09/2014 ರಿಂದ ಸಹಾಯಕ ಲೆಕ್ಕಿಗ ಎಂದು ಕಾರ್ಯನಿರ್ವಹಿಸಿರುತ್ತೇನೆ.

ಈ ಸಂಸ್ಥೆಯು ಶಾಖಾ ವ್ಯವಸ್ಥಾಪಕರಿಗೆ ವಹಿಸಿಕೊಟ್ಟ ಕರ್ತವ್ಯದ ಆದೇಶದಲ್ಲಿ ಬಂಗಾರದ ಆಭರಣಗಳ ಅಡವಿನ ಮೇಲೆ ಸಾಲವನ್ನು ಮಂಜೂರು ಮಾಡಿ ಬಿಡುಗಡೆಗೆ ಆದೇಶಿಸುವ ಅಧಿಕಾರ ಕೇವಲ ಬ್ಯಾಂಕಿನ ಶಾಖಾ ವ್ಯವಸ್ಥಾಪಕರದ್ದು ಮಾತ್ರ ಇರುತ್ತದೆ. ಸಾಲ ಮಂಜೂರು ಮಾಡಿ ಸಾಲ ಬಿಡುಗಡೆ ಆಗುವವರೆಗೆ ನಿರ್ವಹಿಸುವ ಕಾರ್ಯಗಳು ಸರಿಯಾಗಿವೆ ಎಂದು ದೃಡಿಕರಿಸುವ ಕಾರ್ಯವು ಸಹ ಅವರದೇ ಆಗಿರುತ್ತದೆ. ಸಾಲ ಮಂಜೂರು ಮಾಡುವ ಪೂರ್ವದಲ್ಲಿ ಬಂಗಾರ ಸಾಲ ಮಂಜೂರು ಹಾಗೂ ಬಟವಡೆ ವ್ಯವಹಾರದಲ್ಲಿ ಶಾಖಾ ವ್ಯವಸ್ಥಾಪಕರು ನೇರವಾಗಿ ಆಯಾ ಗ್ರಾಹಕರಿಂದ ಬಂಗಾರದ ಸಾಲದ ಅರ್ಜಿಯನ್ನು ಸ್ವತ: ತಾವೇ ತುಂಬಿ ಅದರಲ್ಲಿಯ ವಿವರವನ್ನು ಸಹಿತ ಪರಿಸೀಲನೆ ಗೈದು ಅಡಮಾನ ಮಾಡುವ

ಬಂಗಾರವನ್ನು ಬ್ಯಾಂಕಿನ ಮೌಲ್ಯಮಾಪಕರ ಸಮಕ್ಷಮ ಪರಿಶೀಲಿಸಿ ಅದರ ಮೌಲ್ಯ ಪರಿಗಣಿಸಿ ಅಡುವು ಮಾಡಿದ ಆಭರಣಗಳನ್ನು ತಮ್ಮ ಆಭಿರಕ್ಷೆಯಲ್ಲಿ ಇಟ್ಟುಕೊಂಡು ಸಾಲ ಮಂಜೂರು ಮಾಡುತ್ತಿದ್ದರು. ಇದರಲ್ಲಿ ಪೂರ್ಣತ: ಅವರದೇ ಅಧಿಕಾರವಿದ್ದ ಕಾರಣ ಯಾವುದೇ ರೀತಿಯಿಂದ ನನ್ನ ಕಾರ್ಯ ಸಹಾಯ ಇದರಲ್ಲಿ ಅವಶ್ಯಕತೆ ಇದ್ದಿಲ್ಲ. ಕಾರಣ ಸಾಲದ ಸಂಬಂಧಿ ಬಂಗಾರದ ಮೌಲ್ಯ ಮತ್ತು ಚಿನ್ನದ ಶುದ್ದತೆ ಕುರಿತು ನನ್ನದು ಯಾವುದೇ ವ್ಯವಹಾರದಲ್ಲಿ ಪರಿಶೀಲಿಸುವ ಅವಶ್ಯಕತೆ ಹಾಗೂ ಅಧಿಕಾರ ಇರುವುದಿಲ್ಲ. ಆದುದರಿಂದ, ಬಂಗಾರದ ಶುದ್ಧತೆ, ನೈಜತೆ ಮತ್ತು ಮೌಲಯ ಕುರಿತು ಯಾವುದೇ ರೀತಿಯ ಸಂಬಂಧ ನನ್ನ ಕಾರ್ಯಕ್ಕೆ ಸಂಬಂಧಪಡುವುದಿಲ್ಲ ಎಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ.

14. 9ನೇ ಎದುರುದಾರರ ಆಕ್ಷೇಪಣೆ:-

ನನ್ನನ್ನು ಮೇಲ್ಕಂಡ ಬ್ಯಾಂಕಿನ ಕಿರಿಯ ಸಹಾಯಕ ಹುದ್ದೆಯಲ್ಲಿ ದಿ.1.10.2015 ರಿಂದ ಜಾರಿಗೆ ಬರುವಂತೆ ಬ್ಯಾಂಕಿನವರು ನನ್ನನ್ನು ಸೇವೆಯಿಂದ ಅಮಾನತ್ ಮಾಡಿ ದಿ.28.02.2017ರವರೆಗೆ ಅಮಾನತ್ತಿನಲ್ಲಿ ಇರಿಸಿದ್ದರು.

ನನ್ನ ಮೇಲೆ ಮಾಡಲಾದ ಆಪಾದನೆಗಳ ಬಗ್ಗೆ ವಿಚಾರಣೆ ಜರುಗಿಸಿ ವಿಚಾರಣಾ ವರದಿಯನ್ನು ಆಧಾರವಾಗಿ ಇಟ್ಟುಕೊಂಡು ನನ್ನನ್ನು ದಿ.01.03.2017 ರಿಂದ ಜಾರಿಗೆ ಬರುವಂತೆ ಬ್ಯಾಂಕಿನ ಸೇವೆಯಿಂದ ನನ್ನನ್ನು ವಜಾ ಮಾಡಲಾಗಿದೆ.

ನಾನು ಯಾವುದೇ ದುರ್ವ್ಯವಹಾರ ಮಾಡಿರುವುದಿಲ್ಲ. ನಾನು ಶಾಖಾ ವ್ಯವಸ್ಥಾಪಕರು, ಚಿನ್ನದ ಮೌಲ್ಯಮಾಪಕರು ಇವರೊಂದಿಗೆ ಶಾಮೀಲಾಗಿರುವುದಿಲ್ಲ. ಆಭರಣಗಳನ್ನು ಹಿಂತಿರುಗಿಸುವ ಜಬಾಬ್ದಾರಿ ನನ್ನದಾಗಿರುವುದಿಲ್ಲ. ಲಾಭಾಂಶ ಕೊಡತಕ್ಕ ಖಾತೆಯಲ್ಲಿ ಸದಸ್ಯರ ಸಹಿಯನ್ನು ಫೋರ್ಜ ಮಾಡಿದ ವಿಷಯ ನನಗೆ ಅನ್ವಯಿಸುವುದಿಲ್ಲ. ನಾನು ಕರ್ತವ್ಯ ಇಷ್ಠೆ ಮತ್ತು ಪ್ರಾಮಾಣಿಕತೆ ಪರಿಪಾಲಿಸಿ, ಕ್ಯಾಶಿಯರ್ ಹುದ್ದೆಯಲ್ಲಿ ಕರ್ತವ್ಯಪಾಲನೆ ಮಾಡಿರುತ್ತೇನೆ.

ನಾನು 16 ವರ್ಷಗಳಿಂದ ಕಿರಿಯ ಸಹಾಯಕನಾಗಿ ಸೇವೆ ಸಲ್ಲಿಸಿದ್ದು, ಮೇಲಾಧಿಕಾರಿಗಳ ಮೌಖಿಕ ನಿರ್ದೇಶನದಂತೆ ಕಾರ್ಯನಿರ್ವಹಿಸಿರುತ್ತೇನೆ. ನಾನು ನಿರಪರಾಧಿ ಎಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ.

15. **10ನೇ ಎದುರುದಾರರ ಆಕ್ಷೇಪಣೆ:-**

ಉದ್ಯಮಭಾಗ ಶಾಖೆಯಲ್ಲಿ 01/02/2012 ರಿಂದ ಸೇವೆಯಿಂದ ವಜಾ ಆಗುವವರೆಗೆ ಕಿರಿಯ ಸಹಾಯಕನೆಂದು ಕಾರ್ಯನಿರ್ವಹಿಸಿರುವೆನು, ತದನಂತರ ಅಲ್ಲಿಯ ಶಾಖಾ ಕಾರ್ಯನಿರ್ವಾಹಕರಾದ ಶ್ರೀ ದಿಲಿಪ್ ವಲ್ಲಭದಾಸ್ ತೀಲೋಕಾನಿ ಇವರ ಮೌಖಿಕ ಆದೇಶದಂತೆ ಕಾರ್ಯ ನಿರ್ವಹಿಸಿರುವೆನು, ನನ್ನ ಹುದ್ದೆಗೆ ಸಂಬಂಧಿಸಿದಂತೆ ಯಾವುದೇ ವರ್ಕ ಅಲೋಟಮೆಂಟ ಒದಗಿಸಿರುವುದಿಲ್ಲ. ಶಾಖಾ ಕಾರ್ಯನಿರ್ವಾಹಕರ ಮೌಖಿಕ ಆದೇಶದಂತೆ ಕಾರ್ಯನಿರ್ವಹಿಸಿರುವೆನು.

ಶಾಖೆಯಲ್ಲಿ ಚಿನ್ನದ ಆಭರಣ ಸಾಲಗಳ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಶಾಖಾ ಕಾರ್ಯನಿರ್ವಾಹಕರೊಬ್ಬರೆ ಮಾತ್ರ ಕಾರ್ಯ ಇರ್ವಹಿಸಿದ್ದು ಇರುತ್ತದೆ. ಬಂಗಾರ ಆಭರಣ ಸಾಲಗಾರರು ನೇರವಾಗಿ ಶಾಖಾ ವ್ಯವಸ್ಥಾಪಕರನ್ನೆ ಸಂಪರ್ಕಿಸುತ್ತಿದ್ದರು. ಅವರ ಸಾಲದ ಅರ್ಜಿಗಳನ್ನು ತಾವೇ ತುಂಬಿ ಖರ್ಚಿನ ಪಾವತಿಯ ಮೇಲೆ ಸಾಲಗಾರರ ಸಹಿ ಪಡೆಯುತ್ತಿದ್ದರು, ಅವರಿಗೆ ಕೆಲಸದ ಒತ್ತಡ ಹೆಚ್ಚಾದಾಗ ಬಂಗಾರದ ಸಾಲದ ಅರ್ಜಿಗಳನ್ನು ಭರ್ತಿ ಮಾಡಲು ಕಿರಿಯ ಸಹಾಯಕರಿಗೆ ಆದೇಶಿಸುತ್ತಿದ್ದರು, ಅಲ್ಲದೆ ಬಂಗಾರ ಆಭರಣಗಳ ಮೌಲ್ಯಮಾಪನ ಮಾಡಿಸುವುದು, ಹಣವನ್ನು ಮಂಜೂರು ಮಾಡುವುದು ಅವರೆ ಕಾರ್ಯನಿರ್ವಹಿಸುತ್ತಿದ್ದರು. ಬ್ಯಾಂಕ್ ಮ್ಯಾನೇಜರ ಮೌಖಿಕ ಹೇಳಿಕೆ ಪ್ರಕಾರ ನಾನು ಎಫ್.ಡಿ ಹಾಗೂ ಬ್ಯಾಂಕ್ ಸ್ಟೇಟ್‌ಮೆಂಟ್ ಇತರೆ ಕೆಲಸ ಮಾಡುತ್ತಿದ್ದೆ. ಕೆಲವೊಂದು ಸಂದರ್ಭದಲ್ಲಿ ಕ್ಯಾಶಿಯರ್ ಅಂತ ಕಾರ್ಯನಿರ್ವಹಿಸುತ್ತಿದದ್ದವರು ರಜೆಯ ಮೇಲೆ ಹೋದಾಗ ಮಾತ್ರ ನಾನು ಕ್ಯಾಶಿಯರ್ ಅಂತ ಕಾರ್ಯನಿರ್ವಹಿಸಿರುವೆನು.

ಬಂಗಾರದ ಶುದ್ದತೆ, ನೈಜತೆ, ಮೌಲ್ಯ ಕುರಿತು ಯಾವುದೇ ರೀತಿಯ ಸಂಬಂಧ ನನ್ನ ಕಾರ್ಯಕ್ಕೆ ಸಂಬಂಧ ಪಡುವುದಿಲ್ಲ ಎಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ.

16. **11ನೇ ಎದುರುದಾರರ ಆಕ್ಷೇಪಣೆ:-**

ಉದ್ಯಮಭಾಗ ಶಾಖೆಯಲ್ಲಿ ಪಾಸಿಂಗ್ ಆಫಿಸರ್ ಆಗಿ ದಿನಾಂಕ 13/03/2015 ರಿಂದ 17/06/2015ರ ವರೆಗೆ ಪ್ರಭಾರ ಶಾಖಾ ವ್ಯವಸ್ಥಾಪಕನೆಂದು ಕಾರ್ಯನಿರ್ವಹಿಸಿರುತ್ತೇನೆ.

ಉದ್ಯಮಭಾಗ ಶಾಖೆಯಲ್ಲಿ ಸಹಾಯಕ ಲೆಕ್ಕಿಗ ಹುದ್ದೆಗೆ ಸಂಬಂಧಿಸಿದ ಕೆಲಸ ಅಂದರೆ ಚೆಕ್ ಪಾಸ್ ಮಾಡುವುದು, ಕ್ಲಿಯರಿಂಗ್ ಚೆಕ್ ಪಾಸ್ ಮಾಡುವುದು, ಕ್ಲಿಯರಿಂಗ್ ಬಟವಡೆ ಮಾಡುವುದು, ಹೊಸ ಖಾತೆಯನ್ನು ತೆರೆಯಲು ಬಂದಾಗ (ಉಳಿತಾಯ/ಚಾಲ್ತಿ ಖಾತೆ) ಗ್ರಾಹಕರಿಗೆ ಮಾಹಿತಿ ಒದಗಿಸುವುದು (ನೀಡುವುದು) ಹಾಗೂ ಶಾಖಾ ವ್ಯವಸ್ಥಾಪಕರು ವಹಿಸಿದ ಇತರೇ ಕೆಲಸ ನಿರ್ವಹಿಸುವುದು ಮಾಡಿರುತ್ತೇನೆ. ನಾನು ವ್ಯವಹಾರಗಳು ಮುಗಿದ ನಂತರ (Transactions) ಸಂಬಂಧಿಸಿದ ಲೇಜರ ಖಾತೆಗೆ ಪೋಸ್ಟಿಂಗ್ ಮಾಡುವುದು ಹಾಗೂ ಗಣಕ ಯಂತ್ರದಲ್ಲಿ ಅಳವಡಿಸಿದ್ದನ್ನು ಪಾಸ ಮಾಡುತ್ತಿದ್ದೆನು. ನಾನು ಪಾಸ ಮಾಡಿ ಸಂಬಂಧಿಸಿದ ಖಾತೆಗೆ ಹಣವನ್ನು ವರ್ಗಾವಣೆ ಮಾಡುತ್ತಿದ್ದೇನು. ಹೀಗಾಗಿ ನಾನು ಬಂಗಾರದ ಮೇಲೆ ಸಾಲ ಮಂಜೂರ ಮಾಡಿದ ಅವ್ಯವಹಾರದಲ್ಲಿ ಭಾಗಿಯಾಗಿರುವುದಿಲ್ಲವೆ. ಶಾಖೆಯಲ್ಲಿ ಕಾರ್ಯನಿರ್ವಹಿಸಿದ ವೇಳೆಯಲ್ಲಿ ಚಿನ್ನಾಭರಣಗಳ ಮೇಲಿನ ಸಾಲಕ್ಕೆ ಸಂಬಂಧಿಸಿದ ಅವ್ಯವಹಾರದಲ್ಲಿ ಭಾಗಿಯಾದವರನ್ನು ಮಾತ್ರ ಪರಿಗಣಿಸದೇ ಸಾಮೂಹಿಕವಾಗಿ ಶಾಖೆಯಲ್ಲಿಯ ಎಲ್ಲ ಸಿಬ್ಬಂದಿಯವರನ್ನು ಜಬಾಬ್ದಾರರನ್ನಾಗಿ ಮಾಡಿರುವುದು ಕಾನೂನು ಬದ್ಧವಾಗಿರುವುದಿಲ್ಲ. ಕಾರಣ, ನನ್ನ ವಿವರಣೆಯಲಿ ವಿನಂತಿಸಿ ಕೊಂಡಿರುವಂತೆ ಚಿನ್ನಾಭರಣ ಸಾಲಗಳ ಅವ್ಯವಹಾರಗಳಲ್ಲಿ ನಾನು ಜವಾಬ್ದಾರನಿರುವುದಿಲ್ಲವೆಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ.

17. <u>12ನೇ ಎದುರುದಾರರ ಆಕ್ಷೇಪಣೆ:-</u>

ಬೆಳಗಾಂ ಇಂಡಸ್ಟ್ರಿಯಲ್ ಕೋಆಪರೇಟಿವ್ ಬ್ಯಾಂಕ್ ನಲ್ಲಿ ಗುಮಾಸ್ತನಾಗಿ ಕಾರ್ಯನಿರ್ವಹಿಸಿದ್ದು ಹಾಲಿ ಕರ್ತವ್ಯದಿಂದ ನನ್ನನ್ನು ವಜಾ ಮಾಡಿರುತ್ತಾರೆ. ಬಂಗಾರದ ಅಡಮಾನದ ಸಾಲದಲ್ಲಾದ ಅವ್ಯವಹಾರದ ವಿಷಯ ನನಗೆ ತಿಳಿದಿರುವುದಿಲ್ಲ. ಉದ್ಯಮಭಾಗ್ ಶಾಖೆಯ ಶಾಖಾಧಿಕಾರಿ ಹಾಗೂ ಬಂಗಾರದ ಮೌಲ್ಯಮಾಡಿದವರು ಸೇರಿ ಅಕ್ರಮವೆಸಗಿರುತ್ತಾರೆ. ತನಿಖಾ ಅವಧಿಯಲ್ಲಿ ಬ್ಯಾಂಕಿನ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟು ಅಡಮಾನದ ಸಾಲದ ಕಡತಗಳನ್ನು ಪರಿಶೀಲಿಸಿರುತ್ತಾರೆ. ನನಗೆ ಕೆಲಸ ನಿರ್ವಹಿಸಲು ಜಾಬ್ ಚಾರ್ಟ್ ನೀಡಿರುವುದಿಲ್ಲ. ಬಂಗಾರದ ಅಡಮಾನದ ಸಾಲದ ಕರ್ತವ್ಯ ನನಗೆ ವಹಿಸಿಲ್ಲ ಹಾಗೂ ಆ ಸಂಬಂಧ ಲೆಕ್ಕ ಪತ್ರ ಶಾಖೆಯ ಕಡತಗಳನ್ನು ನಾನು ನಿರ್ವಹಿಸಿಲ್ಲ. ಅಡಮಾನ ಸಾಲವನ್ನು ತಾನು ಹಾಗೂ ತನ್ನ ಸಂಬಂಧಿಕರು ಪಡೆದಿರುವುದಿಲ್ಲ. ಕಾರ್ಯಕಾರಿ ನಿರ್ದೇಶಕರ ಆದೇಶದ

ಮೇಲೆ ಮಾತ್ರ ಬಂಗಾರದ ಅಡಮಾನ ಸಾಲ ಪಾವತಿಸುತ್ತಿದ್ದು ತನ್ನ ಕರ್ತವ್ಯ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

18. **13ನೇ ಎದುರುದಾರರ ಆಕ್ಷೇಪಣೆ:-**

ಉದ್ಯಮಭಾಗ ಶಾಖೆಗೆ ದಿ. 19/11/2014 ರಂದು ಹಾಜರಾಗಿ ದಿ. 21/06/2015 ರವರೆಗೆ ಕಾರ್ಯ ಮಾಡಿರುತ್ತೇನೆ. ಬ್ಯಾಂಕಿನ ಕಿರಿಯ ಸಹಾಯಕರಾಗಿ ಕಾರ್ಯ ಮಾಡುತ್ತಿದ್ದ ಅವಧಿಯಲ್ಲಿ ಉಳಿತಾಯ/ಚಾಲ್ತಿ/ಸಿ.ಸಿ ಖಾತೆಗಳ ನಿರ್ವಹಣೆ ಮಾಡುತ್ತಿದ್ದೆನು. ಬಂಗಾರ ಸಾಲಗಳಿಗೆ ಸಂಬಂಧಿಸಿದಂತೆ ಶಾಖಾ ವ್ಯವಸ್ಥಾಪಕರ ನಿರ್ದೇಶನದಂತೆ ಕಾರ್ಯ ಮಾಡಿರುತ್ತೇನೆ. ಬಂಗಾರ ಸಾಲ ಮಂಜೂರಿ ಮಾಡುವುದು ಶಾಖಾ ವ್ಯವಸ್ಥಾಪಕರ ಕರ್ತವ್ಯವಾಗಿರುತ್ತದೆ. ಮಂಜೂರಿ ಮಾಡುವ ಮುಂಚೆ ಗ್ರಾಹಕರು ಬಂಗಾರ ಆಭರಣಗಳ ಅಡವಿನ ಸಾಲದ ಬೇಡಿಕೆ ಅರ್ಜಿಯನ್ನು ಪರಿಶೀಲಿಸಿ ಬಂಗಾರ ಮೌಲ್ಯಮಾಪಕರಿಂದ ಆಭರಣಗಳ ಪರಿಶುದ್ಧತೆ ಕುರಿತು ಪರಿಶೀಲಿಸಿ ನಿಕ್ಕಿ ತೂಕದ ಬಗ್ಗೆ ದೃಢೀಕರಿಸಿದ ನಂತರ ಶಾಖಾ ವ್ಯವಸ್ಥಾಪಕರು ಆಭರಣಗಳ ಅಡವಿನ ಮೇಲೆ ಎಷ್ಟು ಸಾಲ ನೀಡಬಹುದೆಂದು ನಿರ್ಧರಿಸಿ ಅದರ ಅಂದಾಜು ಬೆಲೆಯ ಶೇ. 75% ರಷ್ಟು ಮಾತ್ರ ಸಾಲದ ರೂಪದಲ್ಲಿ ಶಾಖಾವ್ಯವಸ್ಥಾಪಕರು ಮಂಜೂರಿ ಮಾಡಿ ಅದಕ್ಕೆ ಸಂಬಂಧಿಸಿದಂತೆ ಸಾಲಗಾರರಿಂದ ಬಾಂಡ ಹಾಗೂ ಖರ್ಚಿನ ಪಾವತಿಯ ಮೇಲೆ ಸಾಲದ ಮೊತ್ತವನ್ನು ನಮೂದಿಸಿ ಅವರ ಸಹಿ ಪಡೆದು ಪಾಸಿಂಗ ಆಫೀಸರ್ ಅದನ್ನು ಪರಿಶೀಲಿಸಿ 'ಪೇ ಕ್ಯಾಶ್' ಎಂದು ನಮೂದಿಸಿ ಪಾವತಿ ಮಾಡಲು ಲೆಜರ ಕೀಪರ ಮುಖಾಂತರ ಕ್ಯಾಶಿಯರ ಕಡೆಗೆ ಹೋಗುತ್ತದೆ. ಬಂಗಾರದ ಸಾಲದ ವ್ಯವಹಾರದಲ್ಲಿ ಗ್ರಾಹಕರ ಉಳಿತಾಯ ಖಾತೆ ಇರದೇ ಇದ್ದಲ್ಲಿ ಕೆವೈಸಿ ನಾರ್ಮ ಪ್ರಕಾರ ಅವರ ಉಳಿತಾಯ ಖಾತೆಯನ್ನು ತೆರದು ಸಾಲದ ಹಣವನ್ನು ಉಳಿತಾಯ ಖಾತೆಗೆ ಜಮೆ ಮಾಡುವ ಪದ್ಧತಿಯಂತೆ ಎಲ್ಲವೂ ಒಟ್ಟಿಗೆ ಓಚರಗಳನ್ನು ಪಾಸಿಂಗ ಆಫೀಸರ್ ಪಾಸು ಮಾಡಿದ ನಂತರ ಖಾತೆಗೆ ಜಮಾ ಖರ್ಚು ಮಾಡಿಕೊಳ್ಳಲು ಕಿರಿಯ ಸಹಾಯಕರಿಗೆ ಕಳುಹಿಸುತ್ತಾರೆ. ಆ ಪ್ರಕಾರ ಕಿರಿಯ ಸಹಾಯಕರು ಶಾಖಾ ವ್ಯವಸ್ಥಾಪಕರ ನಿರ್ದೇಶನದಂತೆ ಕಾರ್ಯ ಮಾಡಲಾಗಿದೆ.

ಬಂಗಾರ ಸಾಲಕ್ಕೆ ಸಂಬಂಧಿಸಿದಂತೆ ಕಿರಿಯ ಸಹಾಯಕರ ಪಾತ್ರವು ಕೇವಲ ಸಂಬಂಧಿಸಿದ ಖಾತೆಗಳಿಗೆ ಜಮಾ ಖರ್ಚು ಮಾಡುವುದಾಗಿದೆ. ಬಂಗಾರದ ಶುದ್ಧತೆಯನ್ನು ಪರಿಶೀಲಿಸಿ ಪ್ರಮಾಣೀಕರಿಸುವುದು ಬಂಗಾರ ಮೌಲ್ಯ ಮಾಪಕರಾಗಿರುತ್ತದೆ. ಈ

ವ್ಯವಹಾರದಲ್ಲಿ ಇವರ ಪಾತ್ರವು ಬಹುಮುಖ್ಯವಾಗಿರುತ್ತದೆ. ಈ ವ್ಯವಹಾರಕ್ಕೆ ನಾನು ಯಾವುದೇ ರೀತಿಯಲ್ಲಿ ವೈಯಕ್ತಿಕವಾಗಿ ಸಂಬಂಧಪಡುವುದಿಲ್ಲ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ. ನಾನು ಯಾವ ರೀತಿಯಾಗಿ ಈ ವ್ಯವಹಾರಕ್ಕೆ ಜವಾಬ್ದಾರನಾಗಿರುವುದಿಲ್ಲ.

ಬಂಗಾರ ಆಭರನಗಳು ನಕಲಿ ಅಥವಾ ಅಸಲಿ ಇರುವ ಕುರಿತು ಬಂಗಾರ ಮೌಲ್ಯಮಾಪಕರು ಪರಿಶುದ್ಧತೆಯ ಕುರಿತು ತಾಂತ್ರಿಕವಾಗಿ ಪರಿಶೀಲನನೆ ಮಾಡುತ್ತಾರೆ. ತದನಂತರ ಇವರ ವರದಿಯ್ನು ಆಧರಿಸಿ ಶಾಖಾ ವ್ಯವಸ್ಥಾಪಕರು ಆಭರಣದ ನಿಕ್ಕಿ ತೂಕವನ್ನು ಆಧರಿಸಿ ಬೆಲೆ ನಿಗದಿಪಡಿಸಿ ಸಾಲದ ಮಿತಿಯನ್ನು ನಿರ್ಧರಿಸಿ ಸಾಲ ಮಂಜೂರಿ ಮಾಡುವುದು ಶಾಖಾ ವ್ಯವಸ್ಥಾಪಕರ ಕರ್ತವ್ಯವಾಗಿರುತ್ತದೆ. ಸಾಲಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಪರಿಶೀಲಿಸಿ ಎಲ್ಲ ಸರಿ ಇದೆ ಎಂದ ಮೇಲೆ ಪಾಸಿಂಗ ಆಫೀಸರ್ ಅದನ್ನು ಪೇ–ಕ್ಯಾಶ್ ಎಂದು ಶೀಲ ಹಾಕಿ ಚಿಕ್ಕ ರುಜು ಹಾಕಿ ಕಿರಿಯ ಸಹಾಯಕರಿಗೆ ಲೆಜರ್ ಎಂಟ್ರಿ ಮಾಡಲು ಕಳುಹಿಸಿರುತ್ತಾರೆ. ಪಾಸಿಂಗ ಆಫೀಸರ್ ಪಾಸು ಮಾಡಿದ ವಿತ್ಡ್ರಾವಲ್ ಸ್ಲಿಪ್ ಇದನ್ನು ಆಧರಿಸಿ ಸಂಬಂಧಿಸಿದ ಖಾತೆಗೆ ಎಂಟ್ರಿ ಮಾಡುವುದಷ್ಟೇ ಕಿರಿಯ ಸಹಾಯಕರ ಕರ್ತವ್ಯವಾಗಿರುತ್ತದೆ. ಅಂದ ಮೇಲೆ ನನ್ನ ಕರ್ತವ್ಯದಲ್ಲಿ ಯಾವ ರೀತಿಯಲ್ಲಿ ಯಾವ ಸಂದರ್ಭದಲ್ಲಿ ಈ ವ್ಯವಹಾರಕ್ಕೆ ಜವಾಬ್ದಾರರನ್ನಾಗಿ ಪರಿಗಣಿಸಲಾಗಿದೆ ಎಂಬುದು ಬಿಡಿಸಲಾಗದ ಪ್ರಶ್ನೆಯಾಗಿರುತ್ತದೆ. ಕಾರಣ, ಈ ವ್ಯವಹಾರಕ್ಕೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ.

19. <u>16ನೇ ಎದುರುದಾರರ ಆಕ್ಷೇಪಣೆ:–</u>

ನಮ್ಮ ಬ್ಯಾಂಕಿನ ಒಟ್ಟು 5 ಶಾಖೆಗಳಿದ್ದೂ, ಪ್ರತಿಯೊಂದು ಶಾಖೆಯ ಉಸ್ತುವಾರಿಗಾಗಿ ಪ್ರತ್ಯೇಕ ಸಮಿತಿ ರಚಿಸಲಾಗಿದೆ. ಅದರಂತೆ, ಉದ್ಯಮಬಾಗ ಶಾಖೆಗಾಗಿ ಪ್ರತ್ಯೇಕ ಸಮಿತಿಯನ್ನು ರಚಿಸಲಾಗಿದೆ. ಆ ಸಮಿತಿಯಲ್ಲಿ ಶ್ರೀ ಎಸ್.ಎಸ್. ಸಾತಪುತೆ, ಶ್ರೀ ಶ್ಯಾಮಸುಂದರ ಢವಳಿ ಹಾಗೂ ಶ್ರೀ ಯು.ಜಿ. ಸಂಕಪಾಳ ಇವರು ಕಾರ್ಯನಿರ್ವಹಿಸಿದ್ದಾರೆ. ಎಲ್ಲ ಶಾಖೆಗಳ ಉಸ್ತುವಾರಿ ಸಮಿತಿಯವರು ನಮ್ಮ ಬ್ಯಾಂಕಿನ ಉಪನಿಯಮಗಳಂತೆ, ಕರ್ನಾಟಕ ಸಹಕಾರಿ ಸಂಘಗಳ ನಿಯಮಗಳಂತೆ ಹಾಗೂ ರಿಝರ್ವ ಬ್ಯಾಂಕಿನ ನಿಯಮಗಳ ಪ್ರಕಾರ ಶಾಖೆಗಳ ಉಸ್ತುವಾರಿ ಕೆಲಸವನ್ನು ಮಾಡತಕ್ಕದ್ದಾಗಿದೆ. ಈ ವಿಷಯದಲ್ಲಿ ಯಾವುದೇ

ಲೋಪದೋಷಗಳಾಗಿದ್ದರೆ, ಉದ್ಯಮಬಾಗ ಶಾಖೆಯ ಉಸ್ತುವಾರಿ ಸದಸ್ಯರೇ ಜವಾಬ್ದಾರಿಯಾಗುತ್ತಾರೆ.

ನಮ್ಮ ಬ್ಯಾಂಕಿನ ಚಿನ್ನದ ಆಭರಣಗಳ ಅಡುವಿನ ಸಾಲಗಳನ್ನು ಮಂಜೂರ ಮಾಡುವ ಅಧಿಕಾರವು ಸಂಬಂಧಿಸಿದ ಶಾಖೆಯ ವ್ಯವಸ್ಥಾಪಕರಿಗೆ ದತ್ತವಾಗಿರುತ್ತದೆ. ಬ್ಯಾಂಕು ಒಟ್ಟಿನಲ್ಲಿ 5 ಶಾಖೆಗಳನ್ನು ಹೊಂದಿದ್ದು, ಪ್ರತಿ ತಿಂಗಳು ಎಲ್ಲ ಶಾಖೆಗಳಂದ ಶಾಖಾ ವ್ಯವಸ್ಥಾಪಕರು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಿಗೆ ಪ್ರತಿ ತಿಂಗಳು ಮಂಜೂರಾದ ಸಾಲದ ಖಾತೆಗಳ ಸಂಖ್ಯೆ ಮತ್ತು ಬಿಡುಗಡೆ ಮಾಡಿದ ಮೊತ್ತದ ವಿವರಗಳನ್ನು ಘಟನೋತ್ತರ ಸ್ಥಿರಿಕರಣಕ್ಕಾಗಿ ಸಲ್ಲಿಸಿರುತ್ತಾರೆ. ಆಡಳಿತ ಮಂಡಳಿಯ ಸಭೆಯ ಸಂದರ್ಭದಲ್ಲಿ ಪ್ರಧಾನ ವ್ಯವಸ್ಥಾಪಕರು ಎಲ್ಲಾ ಶಾಖೆಗಳ ಕ್ರೋಡೀಕೃತ ಸಾಲಗಾರರ ಸಂಖ್ಯೆ ಮತ್ತು ಮೊತ್ತವನ್ನು ನಮೂದಿಸಿ ಸಭೆಯಲ್ಲಿ ವಿವರಗಳನ್ನು ಮಂಡಿಸಿರುತ್ತಾರೆ.

ಚಿನ್ನದ ಆಭರಣಗಳ ಬಗ್ಗೆ ಕೇವಲ ಜವಾಬ್ದಾರಿಯು ಪ್ರಧಾನ ವ್ಯವಸ್ಥಾಪಕರ ಮತ್ತು ಶಾಖಾ ವ್ಯವಸ್ಥಾಪಕರದಾಗಿದ್ದು, ಆಡಳಿತ ಮಂಡಳಿಯ ಸದಸ್ಯರ ವೈಯಕ್ತಿಕ ಜವಾಬ್ದಾರಿ ಇರುವುದಿಲ್ಲ. ಮೇಲ್ಕಂಡ ವಿವರಗಳನ್ನು ಹೊರತುಪಡಿಸಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ಉಳಿದ ವಿವರಗಳನ್ನು ಆಡಳಿತ ಮಂಡಳಿಯ ಗಮನಕ್ಕೆ ತಂದಿರುವುದಿಲ್ಲ. ಬ್ಯಾಂಕಿನಲ್ಲಿ ಜೇಷ್ಟತೆಯಲ್ಲಿ ಅತ್ಯಂತ ಹಿರಿಯರಾಗಿರುವ ಅಧಿಕಾರಿಯು ಮುಖ್ಯ ಕಾರ್ಯನಿರ್ವಾಹಕರಾಗಿ ಕಾರ್ಯನಿರ್ವಹಿಸುತ್ತಿದ್ದುದರಿಂದ ಬ್ಯಾಂಕಿನ ಉದ್ಯಮಬಾಗ ಶಾಖೆಯಲ್ಲಿ ನಕಲಿ ಬಂಗಾರದ ಆಭರಣಗಳ ಮೇಲೆ ಸಾಲವನ್ನು ವಿತರಿಸುವಲ್ಲಿ ಆದ ಅವ್ಯವಹಾರಗಳ ಬಗ್ಗೆ ಮುಖ್ಯ ಕಾರ್ಯನಿರ್ವಾಹಕರೇ ಜವಾಬ್ದಾರಿಗಳಾಗಿರುತ್ತಾರೆ. ಯಾವುದೇ ಸಂದರ್ಭದಲ್ಲಿ ಇದನ್ನು ಆಡಳಿತ ಮಂಡಳಿಯ ಸದಸ್ಯರ ಮೇಲೆ ಹೊರಿಸುವುದು ಸರಿ ಅಲ್ಲ. ಏಕೆಂದರೆ ಆಡಳಿತ ಮಂಡಳಿಯ ಸದಸ್ಯರು ಬಂಗಾರದ ಆಭರಣಗಳ ಪಕ್ವತೆಯನ್ನು ಪರೀಕ್ಷಿಸಲು ಅಗತ್ಯವಾದ ಜ್ಞಾನವನ್ನು ಹೊಂದಿರುವುದಿಲ್ಲ.

ಬ್ಯಾಂಕಿಗೆ ಅಡಮಾನು ಮಾಡಿದ ಆಸ್ತಿಗಳ ಮತ್ತು ಭದ್ರತೆಗಳ ರಜಿಸ್ಟರ್ ನಿರ್ವಹಿಸುವವರು ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯ ಜವಾಬ್ದಾರಿಯಾಗಿರುತ್ತದೆ. ಈ ಅಂಶದಲ್ಲಿ ಆಡಳಿತ ಮಂಡಳಿಯ ಕರ್ತವ್ಯಲೋಪ ಆಗಿರುವುದಿಲ್ಲ. ನಾನು ಸಂಚಾಲಕ ಮಂಡಳದ ಸದಸ್ಯನಾಗಿ ಮೇಲ್ಕಾಣಿಸಿದ ಅವ್ಯವಹಾರದಲ್ಲಿ ಯಾವುದೇ ನಿಟ್ಟಿನಿಂದ ಶಾಮಿಲು ಆಗಿರುವುದಿಲ್ಲ ಎಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ.

**R14, R15, R17, R18, R19, R21, R22, R23, R24 ರವರ ಆಕ್ಷೇಪಣೆ ಈ ಕೆಳಕಂಡಂತೆ ಇರುತ್ತದೆ:-**

ತಾವು ಚುನಾಯಿತ ಪ್ರತಿನಿಧಿ ಇದ್ದು, ಯಾವುದೇ ಕರ್ತವ್ಯವನ್ನು ಬ್ಯಾಂಕಿನವರು ನೀಡಿರುವುದಿಲ್ಲ. ಅಡಮಾನ ಸಾಲದ ಅಕ್ರಮದ ಬಗ್ಗೆ ದೂರು ಸ್ವೀಕೃತವಾದ ನಂತರ ತನಿಖೆ ಕೈಗೊಂಡಿದ್ದು, ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನು ಅಮಾನತ್ತು ಮಾಡಿ ಆದೇಶಿಸಿ ಲೆಕ್ಕಪತ್ರಗಳನ್ನು ವಶಕ್ಕೆ ಪಡೆಯಲಾಗಿರುತ್ತದೆ. ದುರುಪಯೋಗ ಪಡಿಸಿದ ಮೊತ್ತದ ವಸೂಲಿ ಕಾರ್ಯ ಕೈಗೊಳ್ಳಲಾಗಿದೆ. ಸಹಕಾರ ಸಂಘಗಳ ನಿಯಮಗಳ ಪ್ರಕಾರ ತನಿಖೆ ಕೈಗೊಂಡು ವಿಚಾರಣೆ ನಡೆಸಲು ಕ್ರಮ ಜರುಗಿಸಲಾಗಿದೆ. ತಾವಾಗಲಿ, ತಮ್ಮ ಸಂಬಂಧಿಗಳಾಗಲಿ ಅಡಮಾನ ಸಾಲ ಪಡೆದಿರುವುದಿಲ್ಲ ಎಂದು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

20. ಸಹಕಾರ ಸಂಘಗಳ ಅಧಿನಿಯಮ ಕಲಂ 64 ರೀತ್ಯಾ ವಿಚಾರಣಾ ವರದಿಯಲ್ಲಿ "ಅಡವಿನಸಾಲದ ಅವ್ಯವಹಾರದಿಂದ ಬ್ಯಾಂಕಿಗೆ ಉಂಟಾದ ಹಾನಿಯ ಮೊತ್ತಕ್ಕೆ ವರದಿಯಲ್ಲಿ ನಮೂದಿಸಿರುವ ಎದುರುದಾರರನ್ನು ಜಂಟಿಯಾಗಿ ಮತ್ತು ವ್ಯಯುಕ್ತಿಕವಾಗಿ ಜವಾಬ್ದಾರರನ್ನಾಗಿ ಮಾಡಿ ಸಹಕಾರ ಸಂಘಗಳ ಕಾಯ್ದೆ ಕಲಂ 103ರಡಿ ಎ.ಬಿ.ಜೆ. ಅರ್ಜಿ ಸಹಿತ ಕಲಂ 70 ರಡಿ ದಾವೆಯನ್ನು ಹೂಡಿ ಬ್ಯಾಂಕಿನಿಂದ ಚಿನ್ನದ ಆಭರಣಗಳ ಅಡವಿನ ಸಾಲದ ಮೇಲೆ ವಿಧಿಸುವ ಸದಾ ಬಡ್ಡಿ ಹಾಗೂ ದಂಡವನ್ನು ವಸೂಲು ಮಾಡಲು ಶಿಫಾರಸ್ಸು ಮಾಡಲಾಗಿದೆ. ಸಿಬ್ಬಂದಿಗಳ ಮೇಲೆ ಬ್ಯಾಂಕಿನ ಸಿಬ್ಬಂದಿ ಸೇವಾ ನಿಯಮ 11 ರನ್ವಯ ಶಿಸ್ತಿನ ಕ್ರಮ ಜರುಗಿಸಲು ಸೂಚಿಸಿರುತ್ತಾರೆ. ಆಡಳಿತ ಮಂಡಳಿಯ ಸದಸ್ಯರ ವಿರುದ್ಧ ಕ.ಸ.ಸಂ. ಕಾಯ್ದೆ ಕಲಂ 29ಸಿ, 109 ಸಹವಾಚಕ 111ರಡಿ ಹಾಗೂ ಕಲಂ 30 ರಡಿ ಕ್ರಮ ಜರುಗಿಸಲು ಶಿಫಾರಸ್ಸು ಮಾಡಲಾಗಿದೆ.

21. ತನಿಖಾ ವರದಿಯಲ್ಲಿ ಕಂಡುಬಂದ ಅಂಶಗಳು:

(1) ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ದಾಖಲೆ ಪರಿಶೀಲಿಸಲಾಗಿ KAT ನಂ. 189/2015 ಅರ್ಜಿಯ ಪ್ರತಿ ಪೂರ್ಣವಾಗಿ ಸಲ್ಲಿಸಿರುವುದಿಲ್ಲ. ಆದೇಶದ ಪ್ರತಿಯನ್ನು ಸಲ್ಲಿಸಿದ್ದು ಪರಿಶೀಲಿಸಲಾಗಿ ಉಧ್ಯಮ ಭಾಗ ಶಾಖೆಯ ಇಂಡಸ್ಟ್ರಿಯಲ್

ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ 3ನೇ ಎದುರುದಾರರು ಬಂಗಾರದ ಮೌಲ್ಯಮಾಪಕರಾಗಿ ಕರ್ತವ್ಯ ನಿರ್ವಹಿಸುವ ಅವಧಿಯಲ್ಲಿ ನಕಲಿ ಬಂಗಾರದ ಆಭರಣಗಳನ್ನು ಅಡವಿಟ್ಟು ಬ್ಯಾಂಕಿಗೆ ವಂಚಿಸಿದ್ದು ಬ್ಯಾಂಕ್‌ಗೆ ಉಂಟಾದ ಲುಕ್ಸಾನು ಮೊತ್ತ ರೂ.3,79,39,500/- ಗಳ ಬಗ್ಗೆ 3ನೇ ಎದುರುದಾರರ ವಿರುದ್ಧ ಕ್ರಮ ಜರುಗಿಸಲಾಗಿದ್ದು ತಡೆಯಾಜ್ಞೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಪ್ರಕರಣದಲ್ಲಿ ಯಾವುದೇ ತಡೆಯಾಜ್ಞೆಯನ್ನು ನೀಡಿರುವುದಿಲ್ಲ.

(2) Crl. P. No. 100737/2015 ರ ಅರ್ಜಿಯು 3ನೇ ಎದುರುದಾರರು ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿದ ಅರ್ಜಿಯಾಗಿರುತ್ತದೆ.

(3) ಸಹಕಾರ ಸಂಘಗಳ ಸಹಾಯಕ ನಿಬಂಧಕರ ನ್ಯಾಯಾಲಯದ ಪ್ರಕರಣ ಸಂಖ್ಯೆ: 2296/2014-15ಕ್ಕೆ ಸಂಬಂಧಪಟ್ಟ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

(4) ಕ್ರಿಮಿನಲ್ ಪ್ರಕರಣ ನಂ. 28/2015 ದಾಖಲಾದ ಬಗ್ಗೆ ಮಾಹಿತಿ ಲಭ್ಯವಾಗಿರುತ್ತದೆ.

(5) ಸಹಕಾರ ಸಂಘಗಳ ಅಧಿನಿಯಮ ಕಲಂ 64ರ ವಿಚಾರಣಾ ವರದಿ ರೀತ್ಯಾ ಬ್ಯಾಂಕಿನಲ್ಲಿ ನಡೆದ ಅಡವಿನ ಸಾಲದ ಅವ್ಯವಹಾರಕ್ಕೆ ಎದುರುದಾರರು ಜಂಟಿಯಾಗಿ ಹಾಗೂ ವೈಯುಕ್ತಿಕವಾಗಿ ಜವಾಬ್ದಾರರಾಗಿದ್ದು ಸದರಿ ವರದಿಯಲ್ಲಿ ನಮೂದಿಸಿದಂತೆ ಕಲಂ 70 ರಡಿ ದಾವೆಯನ್ನು ಹೂಡಿ ದಂಡ ಮತ್ತು ಬಡ್ಡಿಯನ್ನು ವಸೂಲು ಮಾಡಲು ಶಿಫಾರಸ್ಸು ಮಾಡಿದ್ದು ಈ ಬಗ್ಗೆ ಕ್ರಮ ವಹಿಸಿ ದಂಡ ಮತ್ತು ಬಡ್ಡಿಯನ್ನು ವಸೂಲು ಮಾಡಿರುವುದು ಕಂಡುಬಂದಿರುವುದಿಲ್ಲ. ಆಡಳಿತ ಮಂಡಳಿಯ ಸದಸ್ಯರ ವಿರುಧ್ಧವೂ ಕ್ರಮ ಜರುಗಿಸದ ಬಗ್ಗೆ ತನಿಖೆಯಲ್ಲಿ ಕಂಡುಬಂದಿರುವುದಿಲ್ಲ.

(6) ಸಹಕಾರ ಸಂಘಗಳ ಅಧಿನಿಯಮ ಕಲಂ 64ರಡಿ ನಿಬಂಧಕರು ವಿಚಾರಣೆ ಮಾಡಿ ಕಲಂ 68(1)ರ ರೀತ್ಯಾ ವರದಿ ಸಲ್ಲಿಸಿ ವರದಿಯ ರೀತ್ಯಾ ಶಿಫಾರಸ್ಸನ್ನು ನೀಡಿದ್ದು ಸದರಿ ಶಿಫಾರಸ್ಸಿನಂತೆ ಕ್ರಮವಹಿಸಿ ಕಲಂ 68(2) ರೀತ್ಯಾ ಸಹಕಾರ ಸಂಘದ ಆಡಳಿತ ಮಂಡಳಿಯು ಪಾಲನಾ ವರದಿಯನ್ನು ನಿರ್ದೇಶಕರು, ಸಹಕಾರ ಸಂಘಕ್ಕೆ ಸಲ್ಲಿಸಬೇಕಿದ್ದು ಪಾಲನಾ ವರದಿ ಸಲ್ಲಿಸಿದ ಬಗ್ಗೆ ತನಿಖೆಯಲ್ಲಿ ಕಂಡುಬಂದಿರುವುದಿಲ್ಲ.

(7) ಕಲಂ 98(3) ಪ್ರಕಾರ ಸಹಕಾರ ಸಂಘದ ನಿರ್ದೇಶಕರು ಅಗತ್ಯ ಕ್ರಮ ವಹಿಸಿ ಕಲಂ 98(1)ರ ಶಿಫಾರಸ್ಸಿನ ರೀತ್ಯಾ ಕ್ರಮ ಜರುಗಿಸಲು ನಿರ್ದೇಶಿಸಬೇಕಿದ್ದು ಈ ರೀತಿ ಕ್ರಮ ವಹಿಸಿರುವುದು ಕಂಡುಬಂದಿರುವುದಿಲ್ಲ.

22. ಸಹಕಾರ ಸಂಘಗಳ ಜಂಟಿ ನಿಬಂಧಕರು ದಾಖಲೆಗಳ ಸಹಿತ ವರದಿ ಸಲ್ಲಿಸಿದ್ದು ಸದರಿ ವರದಿಯಲ್ಲಿ ಉಧ್ಯಮಬಾಗ ಶಾಖೆಯ ನಕಲಿ ಬಂಗಾರ ಆಭರಣಗಳ ಸಾಲಗಳ ಕುರಿತಂತೆ ಉಧ್ಯಮಬಾಗ ಪೋಲೀಸ್ ಠಾಣೆ, ಬೆಳಗಾವಿ ಇಲ್ಲಿ ಕ್ರೈಂ. ನಂ. 28/2015 ರಡಿ ಪ್ರಕರಣ ದಾಖಲಿಸಿದ್ದು, ಸದ್ಯ ಸದರಿ ಪ್ರಕರಣವು ಸಿ.ಐ.ಡಿ., ಬೆಂಗಳೂರು ಇವರಿಗೆ ವರ್ಗಾಯಿಸಿದ್ದು, ತನಿಖೆಯು ಪ್ರಗತಿ ಹಂತದಲ್ಲಿರುತ್ತದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 64ರ ವರದಿಯ ಕುರಿತು ಜಂಟಿ ನಿಬಂಧಕರು, ಪಟ್ಟಣ ಬ್ಯಾಂಕುಗಳ ವಿಭಾಗ, ಬೆಂಗಳೂರು ಇವರು ಕಲಂ 68ರಡಿ ಆದೇಶ ಹೊರಡಿಸಿದ್ದು, ಸದರಿ ಆದೇಶದ ಪ್ರಕಾರ ಎಲಲ 268 ನಕಲಿ ಬಂಗಾರ ಆಭರಣ ಖಾತೆಗಳ ಸಾಲಗಾರರ ಮೇಲೆ ಸಲ ವಸೂಲಾತಿಗಾಗಿ ಪಂಚಾಯತಿ ದಾವೆ ದಾಖಲಿಸಿದ್ದು ಆದೇಶ ಪೂರ್ವ ಜಪ್ತಿ ಪಡೆದುಕೊಂಡಿದ್ದು ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 9 ಜನ ಸಿಬ್ಬಂದಿಗಳನ್ನು ಸೇವೆಯಿಂದ ವಜಾಗೊಳಿಸಿರುತ್ತದೆ. ಶ್ರೀ ಪಾಂಡಪ್ಪಾ ಎಲ್.ಬೆಳಗಲಿ, ಪ್ರಭಾರ ಮುಖ್ಯ ಕಾರ್ಯನಿರ್ವಹಣಾದಿಕಾರಿ ಇವರ ವಿರುದ್ದ ಕೂಡ ಗೃಹ ವಿಚಾರಣೆ ಜರುಗಿಸಿದ್ದು, ಸದ್ಯ ಮುಗಿಯುವ ಹಂತದಲ್ಲಿರುತ್ತದೆ. ಕಲಂ 64 ರಡಿ ಹಾಗೂ 68ರ ಆದೇಶದ ಪ್ರಕಾರ ಜವಾಬ್ದಾರಿ ನಿಗದಿಪಡಿಸಿದವರ ಮೇಲೆ ನೋಟಿಸು ಜಾರಿ ಮಾಡಲಾಗಿದ್ದು ಸುಸ್ತಿಬಾಕಿದಾರರ ಮೇಲೆ ಪಂಚಾಯತ್ ದಾವೆ ಅಮಲ್ಜಾರಿ ಪ್ರಕರಣ ದಾವೆಗಳನ್ನು ದಾಖಲಿಸಿರುತ್ತದೆ. ಸುಸ್ತಿಬಾಕಿದಾರರ ಪೈಕಿ ಒಟ್ಟು 10 ಖಾತೆಗಳನ್ನು ಸಮಾಪ್ತಿಗೊಳಿಸಿದ್ದು ಜವಾಬ್ದಾರಿ ನಿಗದಿಪಡಿಸಿದವರ ಮೇಲೆ ಕಾನೂನು ಸಲಹೆಗಳನ್ನು ಪಡೆದು ದಾವೆಗಳನ್ನು ದಾಖಲಿಸುವುದು ಪ್ರಗತಿಯಲ್ಲಿರುತ್ತದೆ ಎಂದು ನಮೂದಿಸಿರುತ್ತಾರೆ.

23. ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳ ವರದಿ ಪ್ರತಿ, ಆದೇಶ ಪೂರ್ವ ಜಪ್ತಿ ಆದೇಶ ಪ್ರತಿ, ಪ್ರಾಪರ್ಟಿ ರಿಜಿಸ್ಟರ್ ಕಾರ್ಡ್‌ನ ನಕಲು, ಸುಸ್ತಿದಾರರ ಮೇಲೆ ಪಂಚಾಯತಿ ದಾವೆ ಸಲ್ಲಿಸಿದ ವಿವರವಿರವ ಪಟ್ಟಿ, ಅಮಲ್ಜಾರಿ ಪ್ರಕರಣಗಳ ವಿವರವಿರುವ ಪಟ್ಟಿ, ಕ್ರಿಮಿನಲ್ ಪ್ರಕರಣಗಳ ವಿವರವಿರುವ ಪಟ್ಟಿಗಳನ್ನು ಸಲ್ಲಿಸಿರುತ್ತಾರೆ.

24. ಮೇಲ್ಕಾಣಿಸಿದ ಅಂಶಗಳನ್ವಯ ಎದುರುದಾರ-14,15, 17 ರಿಂದ 19, 21 ರಿಂದ 24 ಖಾಸಗಿ ಚುನಾಯಿತ ಸದಸ್ಯರಾಗಿದ್ದು, ಇವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು,

ಮತ್ತು ಹಣ ವಸೂಲಿಯ ಸಂಬಂಧ ಆರ್‌ಬಿಟ್ರೇಶನ್ ದಾಖಲಿಸಿ ಈಗ ಅಮಲ್ಜಾರಿ ಪ್ರಕರಣ ಚಾಲ್ತಿಯಲ್ಲಿರುತ್ತದೆ.

25. **ಎದುರುದಾರರು-1, 3, 5 ರಿಂದ 11, 13 ಮತ್ತು 16** ಇವರು ಸಹಕಾರಿ ಸಂಘದ ನೌಕರರಾಗಿದ್ದು, ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಬ್ಯಾಂಕಿಗೆ ನಕಲಿ ಬಂಗಾರವನ್ನು ಪಡೆದು ಸಾಲವನ್ನು ನೀಡಿ ನಿರ್ಲಕ್ಷ್ಯ ಭಾವನೆ ತೋರಿರುವುದು ತನಿಖಾ ವರದಿಯಿಂದ ಹಾಗೂ ಅವರುಗಳಿಗೆ ವಹಿಸಿದ ಜವಾಬ್ದಾರಿ ಕೆಲಸವನ್ನು ಸರಿಯಾಗಿ ಮಾಡದೆ ಸದಸ್ಯರೊಂದಿಗೆ ಶಾಮೀಲಾಗಿ ನಕಲಿ ಬಂಗಾರದ ಸಾಲವನ್ನು ನೀಡುವಲ್ಲಿ ಸಹಕರಿಸಿರುವುದು ಕಂಡುಬರುತ್ತದೆ.

26. ಸಹಕಾರ ಸಂಘಗಳ ವಿಚಾರಣಾ ವರದಿ ಕಲಂ 68(1)ರ ಶಿಫರಸ್ಸುಗಳನ್ನು ಕಲಂ 68(3) ಪ್ರಕಾರ ನಿಯಮಾನುಸಾರ ಕ್ರಮ ವಹಿಸಲು ಹಾಗೂ ವಹಿಸಿದ ಕ್ರಮವನ್ನು ಈ ಸಂಸ್ಥೆಗೆ ವರದಿ ಮಾಡುವಂತೆ ಸೂಚಿಸಿ ಶಿಸ್ತು ಪ್ರಾಧಿಕಾರಕ್ಕೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

27. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand

[ನ್ಯಾಯಮೂರ್ತಿ ಎನ್. ಆನಂದ]
ಉಪಲೋಕಾಯುಕ್ತರು, 25/4
ಕರ್ನಾಟಕ ರಾಜ್ಯ, ಬೆಂಗಳೂರು.